ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 38 ಸೆಪ್ಟೆಂಬರ್ 20, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಭ್ರಮಾಲೋಕದಲ್ಲಿರುವುದು ಯಾರು ?

ಬಂಡವಾಳಶಾಹಿ ಪತ್ರಿಕೆಗಳು ಮಾಡುತ್ತಿರುವ ಆರೋಪಕ್ಕೆ ಪ್ರತ್ಯುತ್ತರ

– ಇ. ಎಂ. ಎಸ್. ನಂಬೂದ್ರಿಪಾದ್

ನಮ್ಮ ಪ್ರಮುಖ ಪ್ರತಿಕೆಗಳ ಸಂಪಾಕೀಯ ಲೇಖಕರಿಗೂ ವರದಿಗಾರರಿಗೂ ತಮಗೆ ತಾವೇ ಮೋಸ ಮಾಡಿಕೊಳ್ಳುವ ಮತ್ತು ತಮ್ಮ ಓದುಗರಿಗೆ ಮೋಸ ಮಾಡುವ ಕಲೆ ಚೆನ್ನಾಗಿ ಸಿದ್ಧಿಸಿದೆ. ಕೇಂದ್ರದಲ್ಲಿ ಕಾಂಗ್ರೆಸನ್ನು ಅಧಿಕಾರದಿಂದ ಇಳಿಸ ಬೇಕಾದರೆ ಎಡ ಪಕ್ಷಗಳಿಂದ ಹಿಡಿದುಬಿ.ಜೆ.ಪಿ.ಯವರಿಗೆ ಎಲ್ಲಾ ವಿರೋಧಪಕ್ಷಗಳು ಒಗ್ಗೂಡಿದರೆ ಮಾತ್ರ ಸಾಧ್ಯ ಎಂದು ಇವರಪ್ರಚಾರ ಬಿ.ಜೆ.ಪಿ.ಯನ್ನು ಈ ಸಾಮಾನ್ಯ ಚಳುವಳಿಯಿಂದ ಹೊರಗಿಡಬಯಸುವ ಎಡಪಕ್ಷಗಳ ಅದರಲ್ಲೂ ಸಿ.ಪಿ.ಐ[ಎಂ] ವಿರುದ್ಧ ಈ ಪತ್ರಿಕೆಗಳು ಕತ್ತಿ ಮಸೆಯುತ್ತಿವೆ. ಬಿ.ಜೆ.ಪಿ.ಯನ್ನು ದೂರವಿಡುವುದಾದರೆ, ಎಡಪಕ್ಷಗಳು ರಾಜೀವ ಗಾಂಧಿಯ ಸರ್ಕಾರದ ವಿರುದ್ಧ ಆರಂಭಿಸಿರುವ ಹೋರಾಟದ 'ಪ್ರಾಮಾಣಿಕತೆ'ಯ ಬಗ್ಗೆ ಸಂಶಯ ಪಡಬೇಕಾದೀತು. ಎಂಬುದು ಈ ಪತ್ರಿಕೆಗಳ ಅಭಿಪ್ರಾಯ

ಈ ರಾಜಕೀಯ "ವಿಶ್ಲೇಷಣೆ"ಯ ಹಿನ್ನೆಲೆಯಲ್ಲಿ ನಮ್ಮ "ಸರ್ವಜ್ಞ" ಪತ್ರಕರ್ತರು ಎಡಪಕ್ಷಗಳಮಧ್ಯೆಮತ್ತು ಪ್ರತೀ ಪಕ್ಷಗಳೊಳಗೆ ಈ ಬಗ್ಗೆ "ಭಿನ್ನಾಭಿಪ್ರಾಯ" ಗಳಿವೆ ಎಂದು ಗೀಚಾತೊಡಗಿದ್ದಾರೆ. ನಮ್ಮ ಪಕ್ಷದಲ್ಲಿ ಕಾಂ. ಜ್ಯೋತಿಬಸು ಬಿ.ಜೆ.ಪಿ.ಯ ಜತೆ ಹೊಂದಾಣಿಕೆಗೆ "ಒತ್ತಾಯ ಹೇರುತ್ತಿದ್ದಾರೆ" ಎಂಬ ವದಂತಿಗಳನ್ನು ಇವರು ಹರಡ ತೊಡಗಿದ್ದಾರೆ. ಆದರೆ ಜ್ಯೋತಿ ಬಸು ಅವರು "ಬಿ.ಜೆ.ಪಿ. ಒಂದು ಕೋಮುವಾದಿ ಪಕ್ಷ. ನಾವುಯಾವುದೇ ರೀತಿಯ ರಾಜಕೀಯ ಸಂಬಂಧ ಅದರ ಜತೆಗೆ ಇಟ್ಟುಕೊಳ್ಳಲು ಸಾಧ್ಯವಿಲ್ಲ" ಎಂದು ಖಂಡತುಂಡವಾಗಿ ಹೇಳಿ ಅವರ ಆಸೆಗಳಿಗೆ ತಣ್ಣೀರೆರಚಿದ್ದಾರೆ. ಹಿಂದೂಸ್ತಾನ್. ಟೈಂಸ್ ಅಂತೂ ಜ್ಯೋತಿ ಬಸು ಅವರ ಹೇಳಿಕೆಯಿಂದ ವಿರೋಧ ಪಕ್ಷಗಳ ಕೊನೆಯಆಸೆ ರಾಜೀವಗಾಂಧಿ ವಿರೋಧವಾಗಿ ಸಾರಾಸಗಟು ಚಳುವಳಿ ಕಟ್ಟುವ ಆಸೆ ಮಣ್ಣುಗೂಡಿತು ಎಂದು ತನ್ನ ಹತಾಶೆಯನ್ನು ತೋಡಿಕೊಂಡಿದೆ

ಎಡ ಪ್ರಜಾಪ್ರಭುತ್ವ ಬದಲಿ

ದೇಶದ ರಾಜಕೀಯ ಬೆಳವಣಿಗೆಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡುವ ಯಾರಿಗೇ ಆಗಲಿ, ಎಡ ಮತ್ತು ಪ್ರಜಾಪ್ರಭುತ್ವ ಬದಲಿ ರಚಿಸುವುದು ಎಡ ಪಕ್ಷಗಳ ಗುರಿ ಎಂಬುದು ಸ್ಪಷ್ಟವಾಗುತ್ತದೆ. ಎಡ ಪಕ್ಷದ ಪ್ರಕಟಣೆಗಳೂ ರಾಜಕೀಯ ಕಾರ್ಯಾಚರಣೆಗಳೇ ಇದಕ್ಕೆ ಸಾಕ್ಷಿ. ಎಡ–ಬಲ ಕೋಮುವಾದಿ ಜಾತ್ಯಾತೀತಪಕ್ಷಗಳೆಂಬ ಯಾವುದೇ ವ್ಯತ್ಯಾಸವಿಲ್ಲದೆ ಎಲ್ಲಾ ಪಕ್ಷಗಳ ಕಲಸು ಮೇಲೋಗರಮಾಡುವುದು ಈ ಪತ್ರಿಕೆಗಳಿಗೇ ಪ್ರೀತಿ. ಇದುನಮ್ಮ ಧೋರಣೆ ಅಲ್ಲ ಸೋಶಲಿಸ್ಟರೆಹಾಗೆ ಬಲ ಪಂಥೀಯ ಪಕ್ಷಗಳೊಂದಿಗೆ ಸೇರಿಕೊಂಡು ಜನತಾ ಪಕ್ಷದ ರಚನೆಯಲ್ಲಿ ಎಡಪಕ್ಷಗಳು ಭಾಗವಹಿಸಲಿಲ್ಲ. ತುರ್ತು ಪರಿಸ್ಥಿತಿಯನ್ನು ಕಿತ್ತೊಗೆಯುವುದರಲ್ಲಿ ಮಾತ್ರ ಜನತಾ ಪಕ್ಷದೊಂದಿಗೆ ಎಡ ಪಕ್ಷಗಳು ಸಹಕರಿಸಿದವು. ಜನತಾದಲ್ಲಿ ಮಾಜಿ ಜನಸಂಘೀಯರಪ್ರಭಾವಜಾಸ್ತಿ ಆದಾಗ, ಆದಕ್ಕೆ ಜನತಾ ಪಕ್ಷದೊಳಗೆ ಪ್ರತಿರೋಧ ಒಡ್ಡಿದ ಜಾತ್ಯಾತೀತ ಶಕ್ತಿಗಳೊಂದಿಗೆ ಸೇರಿ ಮೊರಾರ್ಜಿ ಸರ್ಕಾರ ಉರುಳಿಸುವುದಕ್ಕೆ ಎಡಪಕ್ಷಗಳು ಹಿಂದೆ ಮುಂದೆ ನೋಡಲಿಲ್ಲ.

ಅವತ್ತಿನಿಂದಲೂ ಎಡ ಪಕ್ಷಗಳು ಎಲ್ಲಾ ಧರ್ಮದ ಕೋಮುವಾದಿ ಜಾತೀವಾದಿ ಮತ್ತು ವಿಚ್ಛಿದ್ರಕಾರೀ ಪ್ರತ್ಯೇಕವಾದಿ ಪ್ರಾದೇಶಿಕವಾದಿ ಪಕ್ಷಗಳ ಶಕ್ತಿಗಳ ವಿರುದ್ಧ ನೀತಿಯುತ ನಿಲುವೆಯನ್ನು ತಳೆಯುತ್ತಾ ಅನುಸರಿಸುತ್ತಾ ಬಂದಿವೆ. ಇಂತಹ ನಿಲುವಿನಿಂದಾಗಿಯೇ 1983–84ರಲ್ಲಿ ವಿರೋಧ ಪಕ್ಷಗಳು ಒಮ್ಮತದ ಕನಿಷ್ಟ ಕಾರ್ಯಕ್ರಮದ ಆಧಾರದ ಮೇಲೆ ಒಟ್ಟಿಗೆಕಾರ್ಯನಿರ್ವಹಿಸುವುದು ಸಾಧ್ಯವಾಯಿತು. ಇದೇ ನೀತಿಯ ಮುಂದುವರಿಕೆಯಿಂದ ಬಿ.ಜೆ.ಪಿ. ಹೊರತು ಪಡಿಸಿ ವಿರೋಧಪಕ್ಷಗಳು ನ್ಯಾಯಮೂರ್ತಿ ವಿ.ಕೃಷ್ಣ ಐಯ್ಯರ್ ರವರನ್ನು ರಾಷ್ಟ್ರಪತಿ ಚುನಾವಣೆಗಾಗಿ ವಿರೋಧಿ ಅಭ್ಯರ್ಥಿಯಾಗಿ ನಿಲ್ಲಿಸುವುದು ಸಾಧ್ಯವಾಯಿತು.

ಎಡ ಮತ್ತು ವಿರೋಧ ಪಕ್ಷಗಳ ಐಕ್ಯತೆ

ಪತ್ರಕರ್ತರ ಕನಸಿನ "ಕಲಸುಮೇಲೋಗರ"ದ ಬದಲಾಗಿ ನಿಜವಾಗಿಯೂ ಎಡ ಮತ್ತು ಇತರ ವಿರೋಧ ಪಕ್ಷಗಳ ಐಕ್ಯತೆ ಮೂಡಿ ಬರುತ್ತಿರುವುದು ವಾಸ್ತವತೆ. ಈ ಐಕ್ಯತೆ ಕಾಂಗ್ರೆಸಿನಿಂದ ಉಚ್ಚಾಟಿಸಲ್ಪಟ್ಟಅಥವಾ ರಾಜೀನಾಮೆ ನೀಡಿದ ಮಾಜಿ ಕಾಂಗ್ರೆಸಿಗರಿಂದ ಇನ್ನಷ್ಟು ಬಲಗೊಂಡಿದೆ. ವ್ಯಾಪಕಗೊಂಡಿದೆ.

ಉಚ್ಛ ವಲಯಗಳಲ್ಲಿ ಭ್ರಷ್ಟಾಚಾರ, ಬರ, ಪಕ್ಷದ ಆಂತರಿಕ ಪ್ರಜಾಸತ್ತೆಯ ಬಗ್ಗೆ ವಿ.ಪಿ. ಸಿಂಗ್ ಮತ್ತಿತರರು ಎರಡು ತಿಂಗಳುಗಳಿಂದ ನಡೆಸುತ್ತಿರುವ ಪ್ರಚಾರವನ್ನು ಈರೀತಿ ಅರ್ಥ ಮಾಡಿಕೊಳ್ಳಬೇಕು.ಎಡ ಪಕ್ಷಗಳು ಈ ಪ್ರಚಾರವನ್ನು ಸಕಾರಾತ್ಮಕವಾಗಿ ತೆಗೆದು ಕೊಂಡಿವೆ.

ವಿ.ಪಿ.ಸಿಂಗ್ ನಾಯಕತ್ವದ ಭಿನ್ನಮತೀಯರು, ಎಡ ಮತ್ತು ಜಾತ್ಯಾತೀತ ವಿರೋಧ ಪಕ್ಷಗಳೊಂದಿಗೆ ಐಕ್ಯ ಕಾರ್ಯಾಚರಣೆ ನಡೆಸಬೇಕು ಎಂಬ ದೃಢವಾದ ದಿಟ್ಟ ನಿಲುವು ತಳೆಯುತ್ತಾರೆಯೇ ಎಂಬುದನ್ನು ಕಾದು ನೋಡಬೇಕಾಗಿದೆ. ಇಲ್ಲವೇ ಎಡ ಪಕ್ಷಗಳನ್ನು ಬದಿಗೊತ್ತಿ, ಬಲ ಪಕ್ಷಗಳೊಂದಿಗೆ ಸಹಕಾರದಿಂದ ಹೆಚ್ಚು ಲಾಭವಿದೆ ಎಂಬ ಕೆಲವರ ಸಲಹೆಯನ್ನು ಸ್ವೀಕರಿಸುತ್ತಾರೋ ಎಂಬುದು ಈಗ ಮುಖ್ಯ ಪ್ರಶ್ನೆ. "ಎಡಪಕ್ಷಗಳು ನಮ್ಮ ಸ್ವಾಭಾವಿಕ ಸಹಚರರು" ಎಂಬ ಹೇಳಿಕೆಗಳಿಗೆ

[8ನೇ ಪುಟ ನೋಡಿ]

ರೈತರ ಚಳುವಳಿಯ ಯಶಸ್ಸಿಗೆ ಅಭಿನಂದನೆಗಳು

ಬದುಕಿಗೆ ಅತ್ಯಂತ ಮುಖ್ಯವಾದ ಬೇಡಿಕೆಗಳನ್ನಿಟ್ಟು ರೈತರು, ಹಾಗೂ ಕೃಷಿಕಾರ್ಮಿಕರು ನಡೆಸಿದ ಹೋರಾಟವನ್ನು ಯಶಸ್ವಿಗೊಳಿಸಿದ ಲಕ್ಷಾಂತರ ಜನ ಸಮುದಾಯಕ್ಕೆ ಅಖಿಲ ಭಾರತ ಕೃಷಿಕೂಲಿಗಾರರ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪಿ.ಕೆ.ಕುಂಜಚ್ಚನ್ ಹಾಗೂ ಅಖಿಲ ಕಿಸಾನ್ ಸಭಾದ ಜಂಟೀ ಕಾರ್ಯದರ್ಶಿ ಪ್ರತಾಪ್ ಕೆ.ಟಂಡನ್ ಅಭಿನಂದಿಸಿದ್ದಾರೆ. ಒಂದು ವಾರಕಾಲದಲ್ಲಿ ಸಾವಿರಾರು ರೈತರು ಹಾಗೂ ಕೃಷಿ ಕಾರ್ಮಿಕರ ಎಡ ಬಿಡದ ನಿರಂತರ ಶ್ರಮದ ಫಲವಾಗಿ ದೇಶ ಮೂಲೆ ಮೂಲೆಗಳಿಗೆ ಕಿಸಾನ್‌ಸಭಾದ ಹಾಗೂ ಕೃಷಿಕೂಲಿಗಾರರ ಸಂಘಟನೆಯ ಸಂದೇಶಗಳನ್ನು ಕೊಂಡೊಯ್ಯಲು ಸಾಧ್ಯವಾಗಿದೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಈ ರೀತಿಯ ಸಂಯುಕ್ತ ಹೋರಾಟದಿಂದ ಕೃಷಿ ರಂಗದ ಜನ ಸಾಮಾನ್ಯರ ಪ್ರಶ್ನೆಗಳು ಎದ್ದು ಬರುತ್ತವೆಂದು ಅವರು ತಿಳಿಸಿದ್ದಾರೆ. ಬರ ಮತ್ತು ನೆರೆಯ ಪ್ರಕೋಪಕ್ಕೆ ತುತ್ತಾಗಿರುವ ಜನರಿಗೆ ತುರ್ತುಪರಿಹಾರಕ್ಕಾಗಿ ಹೋರಾಟ ಮುಂದೆ ಸಾಗುವು[illegible]ಂದು' ಇತರ ರೈತ ಕೃಷಿ ಕಾರ್ಮಿ[illegible]ಘಟನೆಗಳ ಜೊತೆ ಸೇರಿ ಹೋರ[illegible]ಸಲಾಗು[illegible]ಎಂದು ಅವರು [illegible]

ಎಡ ಪಕ್ಷಗಳಿಂದ ಐಕ್ಯ ಚಳುವಳಿಗೆ ಕರೆ

ಸಿ.ಪಿ.ಐ (ಎಂ), ಸಿ.ಪಿ.ಐ, ಫಾರ್ವರ್ಡ್ ಬ್ಲಾಕ್ ಹಾಗೂ ಆರ್.ಎಸ್.ಪಿ ಗಳ ನಾಯಕರು ದೆಹಲಿಯಲ್ಲಿ 15.9. 1987 ರಂದು ಸಭೆ ಸೇರಿ ರಾಷ್ಟ್ರದ ರಾಜಕಾರಣದಲ್ಲಿ ಜನಪರ ಶಕ್ತಿಗಳನ್ನು ಬಡಿದೆಬ್ಬಿಸುವ ನಿರ್ಣಯವನ್ನು ಕೈಕೊಂಡಿದ್ದಾರೆ.

ಕೋಮುವಾದ ಹಾಗೂ ಪ್ರತ್ಯೇಕತಾವಾದ ಒಡ್ಡುತ್ತಿರುವ ಬೆದರಿಕೆಯ ಬಗ್ಗೆ ರಾಷ್ಟ್ರಾದ್ಯಂತ ಚಳುವಳಿ ಹಾಗೂ ಅಖಿಲ ಭಾರತ ಸಮಾವೇಶವನ್ನು ಸಂಘಟಿಸಬೇಕೆಂದೂ ಅದಕ್ಕಾಗಿ ಇತರ ಜಾತ್ಯಾತೀತ ಪಕ್ಷಗಳ ಹಾಗೂ ವ್ಯಕ್ತಿಗಳ ಸಹಕಾರವನ್ನು ಕೋರಬೇಕೆಂದು ಎಡ ಪಕ್ಷಗಳು ನಿರ್ಧರಿಸಿವೆ. ಅ[illegible]ಬರ್ ಮೊದಲ ವಾರದಲ್ಲಿ ದೆ[illegible]ಯಲ್ಲಿ ಸಮಾವೇಶ ನಡೆಸಲಿವೆ. [illegible] ಸಭೆ, [illegible]ಸಭೆಯ ಚಳಿಗಾ[illegible] ಅಧಿವೇಶನದ ಪ್ರಾರಂಭದಲ್ಲಿಯೇ ಬೃಹತ್ ರ್‍ಯಾಲಿಯೊಂದನ್ನು ನಡೆಸಬೇಕೆಂದು ನಿರ್ಣಯಿಸಿವೆ. ಈ ರ್‍ಯಾಲಿಯನ್ನು ಸಂಘಟಿಸಲು ಹಾಗೂ ಸಂಯುಕ್ತ ಚಳುವಳಿಯನ್ನು ರೂಪಿಸಲು ಎಡ ಪಕ್ಷಗಳ ನೇತೃತ್ವದ ಸಾಮೂಹಿಕ ಸಂಘಟನೆಗಳ ಸಹಕಾರವನ್ನು ಕೋರಬೇಕೆಂದು ನಿರ್ಣಯಿಸಲಾಗಿದೆ.

ಬರಹಾಗುನೆರೆ ಪರಿಹಾರದ ಪ್ರಶ್ನೆ, ಬೆಲೆ ಏರಿಕೆಯ ಪ್ರಶ್ನೆ, ಸಾರ್ವಜನಿಕ ವಿತರಣಾವ್ಯವಸ್ಥೆಯ ಮೂಲಕಅವಶ್ಯಕ ವಸ್ತುಗಳ ವಿತರಣೆಯ ಪ್ರಶ್ನೆ' ಕೈಗಾರಿಕಾ ಘಟಕಗಳ ಮುಚ್ಚುವಿಕೆಯಪ್ರಶ್ನೆ, ಹಾಗು ಉನ್ನತಸ್ಥಾನಗಳಲ್ಲಿನ ಭ್ರಷ್ಟಾಚಾರದ ಪ್ರಶ್ನೆಗಳನ್ನು ದೇಶಾದ್ಯಂತ ಹಾಗು ಪಾರ್ಲಿಮೆಂಟ್ ಮುಂದೆ ನಡೆಯುವ ರ್‍ಯಾಲಿಯಲ್ಲಿ ಮೊಳಗಿಸುತ್ತದೆ.

ಈ ನಾಲ್ಕು ಎಡ ಪಕ್ಷಗಳು ಇತರ ಜಾತ್ಯಾತೀತ ಪ್ರಜಾಸತ್ತಾತ್ಮಕ ಪಕ್ಷಗಳು ಹಾಗೂ ವ್ಯಕ್ತಿಗಳ ಜೊತೆಯಲ್ಲಿ ನಡೆಸಿದ ಮಾತುಕತೆಗಳನ್ನು ವಿಮರ್ಶಿಸಿದ ಈ ಸಭೆ ಜನರನ್ನು ಬಾಧಿಸುವ ಪ್ರಶ್ನೆಗಳ ಮೇಲೆ ಸಂಯುಕ್ತ ಚಳುವಳಿ ನಡೆಸ ಬೇಕಾದ ಅವಶ್ಯಕತೆ ಬಗ್ಗೆ ಈ ಪಕ್ಷಗಳ ನಡುವೆ ಒಂದುಸ್ಥೂಲ ತಿಳುವಳಿಕೆ ಇದೆ ತಿಳುವಳಿಕೆಯನ್ನು ರೂಪಿಸುವ ಕ್ರಮಗಳು ಮುಂದುವರಿಯುತ್ತವೆ ಎಂದು ಸಿ.ಪಿ.ಐ.(ಎಂ) ಕೇಂದ್ರ ಸಮಿತಿಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸಿ.ಪಿ.ಐ.(ಎಂ)ನ ಪರವಾಗಿ ಇ.ಎಂ ಎಸ್. ನಂಬೂದಿರಿಪಾದ್, ಹರ್ ಕಿಸನ್ ಸಿಂಗ್‌ಸುರಜೀತ್ ಸಿ.ಪಿ.ಐ.ನ ಪರವಾಗಿ ಎ.ಬಿ.ಬರಧಾನ್, ಎಂ.ಫರೂಕಿ,ಹೋಮಿದಾಜಿ,ಇಂದರ್‌ಜೀತ್ ಸಿಂಗ್ ಆರ್.ಎಸ್.ಪಿ.ಯ ಪರವಾಗಿ ತ್ರಿದೀಬ್ ಚೌಧುರಿ ಪ್ರತುಲ್‌ಚೌಧುರಿ ಫಾರ್ವರ್ಡ್ ಬ್ಲಾಕ್ ಪರವಾಗಿ ಚಿತ್ತ ಬಸು ಮತ್ತು ಡಿ.ಡಿ.ಶಾಸ್ತ್ರಿ ಈ ಸಭೆಯಲ್ಲಿ ಭಾಗವಹಿಸಿದ್ದರು. ○

ಜನರನ್ನು ಮರೆತ "ಕೆಂಡದ ಮಳೆ"

ಪ್ರಗತಿಪರ ವಸ್ತುವೊಂದನ್ನು ಚಿತ್ರೀಕರಿಸುವಾಗ ಜನಪರ ಹೋರಾಟದ ಎಲ್ಲಾ ಆಯಾಮಗಳ ಅರಿವಿರದ ನಿರ್ದೇಶಕ ಹೇಗೆ ಚಿತ್ರವೊಂದನ್ನು ಕೆಡಿಸಬಹುದು ಎಂಬುದಕ್ಕೆ "ಕೆಂಡದಮಳೆ" ಸಾಕ್ಷಿ. ಕಥೆಗಾರನ್ನೂ ಕೂಡ ಜನಸಮೂಹವನ್ನು ಮೂಕಪ್ರೇಕ್ಷಕನಾಗಿಸುವುದಕ್ಕೆ ತನ್ನ ಕಾಣಿಕೆ ನೀಡಿದ್ದಾನೆ.

ಕನ್ನಡದ ಖ್ಯಾತ ಛಾಯಾಗ್ರಾಹಕ ಗೌರಿಶಂಕರ್‌ರವರ ಪ್ರಥಮನಿರ್ದೇಶನದ ಚಿತ್ರ "ಕೆಂಡದ ಮಳೆ" ಕೆಂಡದ ಮಳೆ ಚಿತ್ರವಾಗಿ ಬಿಡುಗಡೆಯಾಗುವುದಕ್ಕೆ ಮುಂಚೆಯೇ ಹಲವು ರೀತಿಯಲ್ಲಿ ಸುದ್ದಿ ಮಾಡಿತ್ತು. ಪ್ರಥಮವಾಗಿ ಕೆಂಡದ ಮಳೆಯ ಕಥೆಯೇ ಹಲವು ಸಿಟ್ಟಿನ ಚರ್ಚೆಗಳಿಗೆ ಹಾದಿ ಮಾಡಿ ಕೊಟ್ಟಿತ್ತು.

ತದನಂತರ ಆ ಕಥೆಗೆ ಮತ್ತಷ್ಟು ಅಂಶಗಳನ್ನು ಸೇರಿಸಿ ತಯಾರಿಸಲಾದ ಚಿತ್ರ ಮತೀಯ ಗಲಭೆಗಳಿಗೆ ದಾರಿ ಮಾಡಿಕೊಡಬಹುದೆಂಬ ಭಯದಿಂದ ಪ್ರಾದೇಶಿಕ ಸೆನ್ಸಾರ್ ಮಂಡಳಿ ಅದರ ಬಿಡುಗಡೆಗೆ ಒಪ್ಪಿಗೆ ನೀಡಲಿಲ್ಲ. "ಕೆಂಡದಮಳೆ" ತಂಡ ಕೊನೆಗೆ ಕೇಂದ್ರ ಸೆನ್ಸಾರ್ ಮಂಡಲಿಗೆ ಹೋಗಿ ಗೆದ್ದು ಬಂದಿತು. ಹೀಗಾಗಿ ಚಿತ್ರ ಹಲವು ರೀತಿಯಲ್ಲಿ ಬಿಡುಗಡೆಗೆ ಮುಂಚೆಯೇ ಚರ್ಚೆಯ ವಸ್ತುವಾಗಿತ್ತು.

ಈ ಚಿತ್ರಕ್ಕೆ ಕುಂ.ವೀರಭದ್ರಪ್ಪನವರ "ಕೆಂಡದಮಳೆ" ಕರೆವಲ್ಲಿ ಉದಕವಾಗಿದ್ದವರ ಕಥೆಯೇ ಮೂಲ. ಏಕೈಕ ಮುಸ್ಲಿಂ ಕುಟುಂಬ ಹಾಗೂ ಅವರ ಮೇಲೆ ಊರ ಪಟ್ಟಭದ್ರರ ದಾಳಿ ಕಥೆಯ ವಸ್ತು. ಚಿತ್ರದಲ್ಲಿ ಈ ಕಥೆಗೆ ಊರ ಮಠವನ್ನು ಸೇರಿಸಿ ಧರ್ಮದ ಮೂಲಕ ನಡೆಯುವ ಶೋಷಣೆಯನ್ನು ಸೋಧಿಸುವ ಪ್ರಯತ್ನ ಮಾಡಲಾಗಿದೆ. ಆದರೆ ಈ ಚಿತ್ರ ತನ್ನ ಕಾವು ಕಳೆದುಕೊಳ್ಳುವುದು ವಾಸ್ತವದ ಕೊರತೆಯಿಂದ.

ಒಂದು ಕುಟುಂಬವನ್ನು ಶೋಷಿಸುವಾಗ, ಅಂತಹದೇ ನೋವುಗಳನ್ನು ಉಂಡ ಊರಿನ ಬಹುಪಾಲು ಜನ ಮಿಸುಕಾಡದಂತಿರುತ್ತಾರೆ. ಕೂಲಿ ಕೆಲಸಕ್ಕಾಗಿ ಪರದಾಟ ನಡೆಸುವ ಮುಸ್ಲಿಂ ಕುಟುಂಬದ ಅನುಭವಿಗಳೆ ಊರಿನ ಬಹುಪಾಲು ಜನರ ಅನುಭವಗಳೆಂಬುದನ್ನು ಕಥೆಗಾರ ಹಾಗೂ ನಿರ್ದೇಶಕರು ಮರೆಯುತ್ತಾರೆ. ಹೀಗಾಗಿಯೇ ಇಡೀ ಊರ ಜನತೆ ಪ್ರಮುಖವಾಗಬೇಕಾಗಿದ್ದ ಚಿತ್ರದಲ್ಲಿ ಕೇವಲ ಮುಸ್ಲಿಂ ಕುಟುಂಬ ಮಾತ್ರ ಮುಖ್ಯವಾಗುತ್ತದೆ. ಈ ಮುಸ್ಲಿಂ ಕುಟುಂಬವೂ ಹಿಂದು ಮುಸ್ಲಿಂ ಎಂಬ ಭೇದವಿಲ್ಲದೆ ಇಡೀ ಊರಿನ ದಿನನಿತ್ಯದ ಬದುಕಿನಲ್ಲಿ ಬೆರೆತು ಹೋಗಿರುವವರೆಂದು ಪದೇ ಪದೇ ತೋರಿಸಲಾಗುತ್ತದೆ.

ಹೀಗಿದ್ದರೂ ಜನ ಯಾವ ಹಂತದಲ್ಲಿಯೂ ಮುಸ್ಲಿಂ ಕುಟುಂಬದ ನೋವುಗಳೊಡನೆ ತನ್ನನ್ನು ತಾನು ಕಂಡುಕೊಳ್ಳುವುದಿಲ್ಲ. ಈ ಸೋಲು ಚಿತ್ರದ ಪ್ರತೀ ಹಂತದಲ್ಲೂ ಎದ್ದು ಕಾಣುತ್ತದೆ. ಈ ಕಾರಣದಿಂದಾಗಿಯೇ ಚಿತ್ರ ಒಂದು ಘಟ್ಟದಿಂದಮತ್ತೊಂದು ಘಟ್ಟಕ್ಕೆ ಬೆಳವಣಿಗೆ ಹೊಂದದೆ ನಿಂತ ನೀರಾಗುತ್ತದೆ. ಈ ಸ್ಥಗಿತತೆಯ ಕೊನೆಯ ಹಂತ ಊರ ಗೌಡನ ಮಗ ಮುಸ್ಲಿಂ ಕುಟುಂಬದ ತರುಣಿಯನ್ನು ಮಾನಭಂಗ ಮಾಡಲು ಪ್ರಯತ್ನಿಸುವ ದೃಶ್ಯ.

ಈ ಹಂತದಲ್ಲಿ ಗೌಡನ ಮಗ ಇಡೀ ಹಳ್ಳಿಯ ಸಮಸ್ತರ ಮುಂದೆ ಆ ತರುಣಿ ಮುಗಿಲು ಮುಟ್ಟುವಂತೆ ಊರವರನ್ನು ರಕ್ಷಿಸಲುಕರೆಯುತ್ತಾಳೆ. ಊರವರು ದೊಂಬರಾಟ ಪ್ರೇಕ್ಷಕರಂತೆ ಸುಮ್ಮನಿರುತ್ತಾರೆಯೇ ಹೊರತು ರಕ್ಷಣೆಗೆ ಮುಂದಾಗುವುದಿಲ್ಲ. ನಂತರ ಮಾನಭಂಗ ಪ್ರಯತ್ನ ನಡೆಯುವಾಗ ಊರ ಪೂಜಾರಿ ಗುರುವಗೌಡನ ಮಗನನ್ನು ಕೊಲ್ಲುತ್ತಾನೆ. ಆಗಲೂ ಊರ ಜನರು ಮೂಕರಾಗಿಯೇ ಇರುತ್ತಾರೆ. ಗೌಡನ ಹೆಂಡತಿ ಗೌಡನನ್ನು ತಿರಸ್ಕರಿಸಿ ಮುಸ್ಲಿಂ ತರುಣಿಯೊಡನೆ ಹೋಗುತ್ತಾಳೆ. ಈ ಕ್ರಿಯೆಗೂ ಚಿತ್ರದಲ್ಲಿ ಮೊದಲಿನಿಂದ ತೋರಿಸಿದ ಸಂಗತಿಗಳಲ್ಲಿ ಯಾವುದೇ ಬೆಂಬಲ ಸಿಗುವುದಿಲ್ಲವಾದರಿಂದ ಇದು ಅವಾಸ್ತವಿಕವಾಗಿ ನಾಟಕೀಯವಾಗಿ ಕಂಡು ಬರುತ್ತದೆ.

ಈ ಮಧ್ಯೆ ಮುಸ್ಲಿಂ ಕುಟುಂಬದ ಯುವಕನ (ಬಾಷಾ) ಬಂಡಾಯ ಕೂಡ ಈ ಎಲ್ಲಾ ಜೊಳ್ಳುತನದಮಧ್ಯೆ ಮಸಾಲೆಯ ಅಂಶವಾಗಿ ಕಂಡುಬರುತ್ತದೆ. ಭಾಷಾ ಸಹ ಜನರನ್ನು ಗಣನೆಗೆ ತೆಗೆದುಕೊಳ್ಳದೇ ಕನಿಷ್ಟ ತನ್ನ ಎಲ್ಲಾ ಕೃತ್ಯಗಳಿಗೂ ಬೆಂಬಲ ನೀಡುತ್ತಿದ್ದ ತನ್ನ ಮನೆಯವರನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಕೇವಲ ವೈಯುಕ್ತಿಕವಾಗಿ ಗೌಡನ ಕೊಲೆಗೆ ಎರಡು ಮೂರು ಭಾರಿ ಪ್ರಯತ್ನಿಸಿ ಜೈಲಿಗೆ ಹೋಗುವುದುರಲ್ಲಿನ ಭಾಷಾನ ಸೋಲು ಇಡೀಚಿತ್ರದಲ್ಲಿ ಪ್ರತಿಭಟಿಸುವವನ ಸೋಲಿನಂತೆ, ಪ್ರತಿಭಟನೆಯ ಸೋಲಿನಂತೆ ಕಂಡುಬರುತ್ತದೆ. ಬಿಗಿಯಿಲ್ಲದ ಕಥೆಯ ಬಂಧ ವಾಸ್ತವದಲ್ಲಿನ ಚಲನೆಗಳ ಸೂಕ್ಷ್ಮತೆಯನ್ನು ಹಿಡಿಯುವುದರಲ್ಲಿನ ವೈಫಲ್ಯ ಚಿತ್ರವನ್ನು ಸೊರಗಿಸುತ್ತವೆ.

ಚಿತ್ರ ವಿಮರ್ಶೆ

ಕಲಿಯಣ್ಣ ಕಲಿಯೊ !

ಕಲಿಯಣ್ಣ ಕಲಿಯೊ ನೀ ತಿಳಿಯಣ್ಣ ತಿಳಿಯೋ ||ಪ||
ತಳದಿಂದ ಮೊದಲಿಟ್ಟು ಕೊನೆ ತನಕ ಕಲಿಯೋ ||ಅ.ಪ||

ಆಗಿಲ್ಲ ತಡವೇನು ಈಗಲೂ ಕಲಿಯೋ
ಅ ಆ ಇ ಈ ಉ ಊ ಶುರು ಮಾಡಿ ಕಲಿಯೊ
ಅಷ್ಟು ಸಾಲದು ಗೊತ್ತು ಎದೆ ಗುಂದ ಬೇಡ

ನೀನು ಕಲಿಯಲೇ ಬೇಕು
ನೀನು ತಿಳಿಯಲೇ ಬೇಕು
ಸೇನಾಧಿಪತ್ಯಕ್ಕೆ ಅಣಿಯಾಗುವವನು. ||ಪ||

ಗಡೀಪಾರಾದ ದೇಶ ಪ್ರೇಮಿಯನ್ನು
ಸೆರೆಯಲ್ಲಿ ಕೊಳೆವ ಸಂಗಾತಿಯನ್ನು
ಅಡುಗೆ ಮನೆಯಲ್ಲಿರುವ ನಿನ್ನ ಹೆಂಡತಿಯನ್ನು
ಬೆನ್ನು ಬಾಗಿ ಹೋದ ಪಿಂಚಣಿ ನೌಕರನನ್ನು
ಕಡೆಗಣಿಸಿ ಬಿಡಬೇಡ
ಕಲಿಯಣ್ಣ ಕಲಿಯೋ....... ||ಪ||

ಮನೆಯಿರದ ಮಂದಿಯೋ ! ನೀನು ಬಡಪಾಯಿ
ಚಳಿಗೆ ಸುರಟೆ ಕೊಂಡು ಹಸಿವಿನಿಂದ ಸತ್ತವನೆ !
ಹುಡುಕು ಪುಸ್ತಕವೊಂದ ಕೈಚಾಚಿ ಎಟುಕಿಸು
ಬಿಚ್ಚು ಗತ್ತಿಯುಹುದೋ ಅದು ನಿನ್ನ ಕೈಯೊಳಗೆ
ಕಲಿಯಣ್ಣ ಕಲಿಯೋ ||ಪ||

ಪ್ರಶ್ನೆ ಕೇಳುವುದಕ್ಕೆ ಹೆದರದಿರು ಒಡನಾಡಿ !
ಕಣ್ಮುಚ್ಚಿ ನಂಬದಿರು ನೀನೆ ಕಾಣುವ ತನಕ ;
ಹೇಗೆ ಬಂದಿತು ಎಂದು ಲೆಕ್ಕ ಕೇಳಲೇ ಬೇಕು
ಚಿಕ್ಕ ವಿವರದ ಮೇಲು ಬೆರಳಿಟ್ಟು ನೀನು
ನೀನೆ ಕಲಿಯದ ವಿಷಯ ನಿನಗೆ ತಿಳಿಯದ ವಿಷಯ
ಅದಕಾಗಿ ಕಲಿಯೋ ||ಪ||

ಸೇನಾಧಿಪತ್ಯಕ್ಕೆ ಸಿದ್ಧನಾಗಲೇ ಬೇಕು
ತಳದಿಂದ ಮೊದಲಿಟ್ಟು ಕೊನೆ ತನಕ ಕಲಿಯೋ ||ಪ||

ಬ್ರೆಕ್ಟ್‌ನ In Praise of Learning
ಹಾಡಿನ ಛಾಯೆ : ಹೆಚ್. ಜಿ. ಸಣ್ಣಗುಡ್ಡಯ್ಯ
ಅಖಿಲ ಭಾರತ ವಿಜ್ಞಾನ ಜಾಥಾದಲ್ಲಿ ಬಳಸಿರುವ ಮುಖ್ಯ ಹಾಡು.

ಕ್ಯೂಬನ್ ಹೋರಾಟದ ಚಿತ್ರ ಸಿಸಿಲಿಯಾ

"ಕ್ಯೂಬದಕ್ರಾಂತಿ ಪೂರ್ವ ಹೋರಾಟವೊಂದರಅಪೂರ್ವ ಚಿತ್ರಣವಾದ "ಸಿಸಿಲಿಯೊ"ವನ್ನು ದೂರದರ್ಶನ ಇತ್ತೀಚೆಗೆ ಪ್ರಸಾರ ಮಾಡಿತು ಆ ಚಿತ್ರಕಥೆಯ ಸಾರಾಂಶ ಇಲ್ಲಿದೆ.

ಕಳೆದ ವರ್ಷ ದೆಹಲಿಯ ಚಿತ್ರೋತ್ಸವದಲ್ಲಿ ಪ್ರದರ್ಶಿಸಲಾದ ಒಂದು ಪರಿಣಾಮಕಾರಿ ಚಿತ್ರ ಇತ್ತೀಚೆಗೆ ದೂರದರ್ಶನದಲ್ಲಿ ಪ್ರಸಾರವಾಯಿತು. ಸ್ಪೈಯಿನ್ ದೇಶದ ವಸಾಹತುಆಡಳಿತದಡಿಯಲ್ಲಿ ಜರ್ಜರಿತರಾಗಿದ್ದ ಕ್ಯೂಬಾದ ಜನತೆ ಗುಲಾಮ ಬದುಕು ಸವೆಸುತ್ತಿದ್ದರು. ಸಿರಿವಂತರು ಕಬ್ಬಿನ ಗದ್ದೆಗಳನ್ನು ಮಾಡಿ ಸಕ್ಕರೆಯನ್ನು ಉತ್ಪಾದಿಸಿ ಯಥೇಚ್ಛ ಲಾಭ ಸಂಪಾದಿಸುತ್ತಿದ್ದರು.

ಕಪ್ಪು ಜನಾಂಗದ ಸ್ತ್ರೀಯರು ಬಿಳಿಯರ ಶಯ್ಯಾ ಗೃಹಗಳಲ್ಲಿ ತಮ್ಮದಿಲ್ಲವನ್ನೂ ಕಳೆದು ಕೊಂಡು ನೂಕುತ್ತಿದ್ದ ದಿನಗಳವು. ಗಂಡಸರು ಕಬ್ಬಿನ ಗದ್ದೆಗಳಲ್ಲಿ, ಸಕ್ಕರೆ ಕಾರ್ಖಾನೆಗಳಲ್ಲಿ ದೇಹ ಸವೆಸುತ್ತಿದ್ದರು. ಕ್ಯೂಬಾದ ಆದಿವಾಸಿಗಳೂ, ಗುಲಾಮರೂ ಬಿಳಿಯರ ದೌರ್ಜನ್ಯ, ಶೋಷಣೆಗಳನ್ನೆದುರಿಸಿ ಆಗಾಗ ಸಿಡಿದೆದ್ದು ಹೋರಾಟ ನಡೆಸಿದ ಅನೇಕ ಸಂದರ್ಭಗಳುಂಟು. ಇಂಥದೊಂದು ಹೋರಾಟದಲ್ಲಿ ತೊಡಗಿದ್ದವನೇ ಬಾಬನ್‌ರೋ ಎಂಬತರುಣ. ಅವನು ಪ್ರೀತಿಸುತ್ತಿದ್ದ ತರುಣಿ ಸಿಸಿಲಿಯಾ. ಇವಳು ಮಿಶ್ರ ಜನಾಂಗಕ್ಕೆ ಸೇರಿದವಳಾದ್ದರಿಂದ ಬೆಳ್ಳಗೆ ಸುಂದರವಾಗಿದ್ದಳು. ಅವಳಿಗೆ ತನ್ನ ಸೌಂದರ್ಯದ ಬಗ್ಗೆ ಒಂದು ರೀತಿಯ ಅಹಂ. ಅವಳನ್ನು ಬಿಳಿಯ ಸಿರಿವಂತರ ನೇಕರು ಬಯಸಿದರು ಅವಳಿಗೆ ಬೇರೆಯೇಒಂದು ಆಕಾಂಕ್ಷೆಯಿತ್ತು. ತಾನು ಈ ನರಕದಿಂದ ಪಾರಾಗಲು ಬಿಳಿಯ ದೊರೆಯೊಬ್ಬ ತನ್ನನ್ನು ಮದುವೆಯಾಗಬೇಕು. ಅವನಭವ್ಯ ಮಹಲಿನಲ್ಲಿ ತಾನು ಮೆರೆಯಬೇಕೆಂಬ ಕಲ್ಪನಾ ಲೋಕದಲ್ಲವಳು ತೇಲಾಡುತ್ತಿದ್ದಳು.

ಗುಲಾಮರನ್ನು ಮಾರಾಟ ಮಾಡುವ ಆಂಗ್ಲ ವ್ಯಾಪಾರಿಯೊಬ್ಬನ ಮಗ ಸಿಸಿಲಿಯಾಳನ್ನು ಇಷ್ಟ ಪಡುತ್ತಾನೆ. ಅವಳ ಮಾದಕ ಕಣ್ಣುಗಳ ಮೋಡಿಗೆ ಬಿದ್ದ ಅವನ್ನು ಅವಳಿಗಾಗಿ ಏನು ಬೇಕಾದರೂ ಮಾಡಲು ತಯಾರಾಗುತ್ತಾನೆ. ಸಿಸಿಲಿಯೊಳಂತೂ ತನ್ನ ಕನಸ್ಸಿನ ರಾಜಕುಮಾರಇವನೇ ಎಂದುಕೊಳ್ಳುತ್ತಾಳೆ.

ಆದರೆ ಹವಾನಾದ ಶ್ರೀಮಂತನೊಬ್ಬನ ಮಗಳಾದ ಇಸಬೆಲ್ಲಾಳನ್ನು ಈ ಆಂಗ್ಲನಿಗೆ ಲಗ್ನ ಮಾಡಲು ಅವನ ತಂದೆ ತಾಯಿಗಳು ನಿಶ್ಚಯಿಸುತ್ತಾರೆ. ಇಸಬೆಲ್ಲಾ ಅವನನ್ನು ಸಂಧಿಸಿ ಮಾತನಾಡುತ್ತಾಳೆ. ಅವಳು ಚೆನ್ನಾಗಿ ಓದಿದವಳು. ನಾಶವಾಗುತ್ತಿರುವ ಭೂಮಾಲಿಕತ್ವದ ಬಗ್ಗೆ ತಿರಸ್ಕಾರವಿರುವವಳು. ಮಾತಿನ ನಡುವೆ ಅವಳು 'ಗುಲಾಮ ವ್ಯಾಪಾರ ಕುರಿತಂತೆ ಸ್ಪೈಯಿನಿಗೂ ಬ್ರಿಟನ್‌ಗೂ ಒಪ್ಪಂದವಾಗಿ ಬಿಟ್ಟಿದೆಯೆನ್ನುತ್ತಾಳೆ. ಅದಕ್ಕವನ್ನು 'ಹೌದು ಬ್ರಿಟನ್ ಗುಲಾಮ ವ್ಯಾಪಾರವನ್ನು ನಿಷೇಧಿಸಿದೆ, ಇದು ನಮ್ಮ ಮಾನವೀಯತೆಯನ್ನು ಪ್ರತಿಬಿಂಬಿಸುತ್ತದೆ.' ಎನ್ನುತ್ತಾನೆ.

'ಇಲ್ಲ, ಇಂಗ್ಲೀಷರು ಹೊಸ ಯಂತ್ರವನ್ನು ಕಂಡು ಹಿಡಿದಿದ್ದಾರೆ, ನೂರು ಮಂದಿ ಗುಲಾಮರು ಮಾಡುವ ಕೆಲಸವನ್ನು ಒಂದು ಯಂತ್ರ ಮಾಡುತ್ತದೆ. ಇದರಿಂದ ಹೆಚ್ಚಿನ ಲಾಭ, ಹೆಚ್ಚಿನ ಉತ್ಪಾದನೆ ದೊರೆಯುತ್ತದೆ. ಗುಲಾಮ ವ್ಯಾಪಾರವನ್ನು ನಿಷೇಧಿಸಿದರೆ ಯಂತ್ರಗಳನ್ನು ತಯಾರಿಸುವ ಬಂಡವಾಳಶಾಹಿಗೆ ಲಾಭ ಅಷ್ಟೆ. ಇದರಲ್ಲಿ ಮಾನವೀಯತೆಯೇನೂ ಇಲ್ಲ' ಎಂದು ಹೇಳುತ್ತಾಳೆ. ಅವಳ ಚಿಂತನಲಹರಿಗೆ ಬೆರಗಾದ ತರುಣ 'ನೀನು ಹೆಣ್ಣೆ ಅಥವಾ ಒಂದು ಪುಸ್ತಕವೇ, ಎಂದು ಉದ್ಗಾರ ತೆಗೆಯುತ್ತಾನೆ. 'ಹೌದು ನಾನೊಂದು ಪುಸ್ತಕವೇ ! ಪೋಪ್ ಧರ್ಮ ಗುರುಗಳಿಂದ ನಿಷೇಧಕ್ಕೆ ಒಳಗಾದ ಅಸಂಖ್ಯ ಪುಟಗಳ ಒಂದು ಪುಸ್ತಕ, ಎಂದು ಹೇಳುತ್ತಾಳೆ.

ಇಸಬೆಲ್ಲಳ ಮೇಲೆ ಅವನಿಗೆ ಪ್ರೀತಿಯಿದ್ದರೂ ಸಿಸಿಲಿಯಾಳನ್ನು ತನ್ನಿಂದ ಮರೆಯಲಾಗುವುದಿಲ್ಲ ಎನ್ನುತ್ತಾನೆ ಗುಲಾಮ ವ್ಯಾಪಾರಿಯ ಮಗ.

ತಪ್ಪಿಸಿಕೊಂಡು ಬಂದ ಇಬ್ಬರು ಗುಲಾಮರಿಗೆ ಬಾಬನ್‌ರೊ ಆಶ್ರಯ ನೀಡುತ್ತಾನೆ. ಭೂಮಾಲಕರ ಕಿಂಕರರು ಅವರನ್ನು ಬೆನ್ನಟ್ಟಿ ಬರುತ್ತಾರೆ. ಗುಲಾಮರನ್ನು ಬಚ್ಚಿಡಲು ಸಿಸಿಲಿಯಾಳ ಸಹಾಯ ಕೇಳುತ್ತಾನೆ. ಬಾಬನ್‌ರೋ ಸಿಸಿಲಿಯಾ ತನ್ನ ಆಂಗ್ಲ ಪ್ರಿಯಕರನ ಅರಮನೆಯಲ್ಲಿ ಅವರಿಗೆ ಆಶ್ರಯ ಒದಗಿಸುತ್ತಾಳೆ. ಇದನ್ನರಿತ ಸಿಸಿಲಿಯಾಳ ಪ್ರಿಯಕರನ ತಾಯಿ ಅಧಿಕಾರಿಗಳೆದುರು ಗುಟ್ಟನ್ನು ಬಯಲು ಮಾಡುತ್ತಾಳೆ. ಸಿಸಿಲಿಯಾ ಬಾಬನ್ರೋನೊಂದಿಗೆ ತನ್ನ ಭಾವೀ ಅತ್ತೆಯ ದ್ರೋಹವನ್ನು ತಿಳಿಸುತ್ತಾಳೆ. ನಂತರ ಅವಳು ಕೋಪೋದ್ರಿಕ್ತಳಾಗಿ ಕತ್ತಿಯನ್ನು ಹಿಡಿದುಕೊಂಡು ಹೋರಾಟಗಾರರೊಡನೆ ಓಡಿ ಹೋಗುತ್ತಾಳೆ.

ಭ್ರಮಾಧೀನಳಾದ ಸಿಸಿಲಿಯಾ ಎತ್ತರದ ಕಟ್ಟಡವೊಂದರ ಮೇಲಿನಿಂದ ಜಿಗಿದು ಆತ್ಮಹತ್ಯೆ ಮಾಡಿಕೊಳ್ಳು

[6ನೇ ಪುಟ ನೋಡಿ]

ರಾಜ್ಯದ ಎಲ್ಲೆಡೆ ರೈತರಿಂದ ಉತ್ಸಾಹದ ಪಿಕೆಟಿಂಗ್ ಸಪ್ತಾಹ

ಅಖಿಲ ಭಾರತ ಕಿಸಾನ್ ಸಭೆ ಮತ್ತು ಅಖಿಲ ಭಾರತ ಕೃಷಿ ಕೂಲಿಗಾರರ ಜಂಟಿ ಸಭೆಗಳ ಕರೆಯಂತೆ ದೇಶಾದ್ಯಂತ ಸೆಪ್ಟೆಂಬರ್ 7ರಿಂದ13ರ ವರೆವಿಗೆ ರೈತರು ಬೃಹತ್ ಚಳುವಳಿಯನ್ನು ನಡೆಸಿ ಲಕ್ಷಗಟ್ಟಲೆ ರೈತರು ಬಂಧನಕ್ಕೊಳಗಾಗಿದ್ದಾರೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರೈತರು ಸ್ವಾತಂತ್ರ್ಯ ಲಭಿಸಿದ ನಲವತ್ತು ವರ್ಷಗಳ ನಂತರ ನಡೆಸುತ್ತಿರುವ ದೇಶವ್ಯಾಪಿ ಈ ಚಳುವಳಿಯು ತಮ್ಮ ಅಗತ್ಯ ಸಮಸ್ಯೆಗಳಾದ ಭೂಮಿ, ಸಾಗುವಳಿ ಹಕ್ಕು ಪತ್ರ, ನೀರಾವರಿ ಸೌಲಭ್ಯ, ಬೆಳೆದ ಬೆಳೆಗಳಿಗೆ ಬೆಂಬಲಿತ ಬೆಲೆ, ಕಡಿಮೆ ಬಡ್ಡಿ ದರದಲ್ಲಿ ಸುಲಭ ಸಾಲದ ವ್ಯವಸ್ಥೆ, ವಸತಿಸೌಕರ್ಯ, ಕನಿಷ್ಟ ಕೂಲಿ ಕಾಯ್ದೆ ಮತ್ತು ಜಾರಿ, ಇತ್ಯಾದಿಗಳಿಗಾಗಿ ಆಗಿದೆ.

ದಬ್ಬಾಳಿಕೆಯ ವಿರುದ್ದ ತೆರಿಗೆಯ ಹೊರೆಯ ವಿರುದ್ದ, ಭ್ರಷ್ಟಾಚಾರದ ವಿರುದ್ಧ ರೈತರು ದೇಶದಲ್ಲಿ ಒಂದಲ್ಲ ಒಂದು ಕಡೆ ಧೀರ ಹೋರಾಟಗಳನ್ನು ನಡಿಸಿದ್ದಾರೆ. ದೇಶ ವ್ಯಾಪಿ ನಡೆದಿರುವ ಸೆಪ್ಟೆಂಬರ್ ಚಳುವಳಿಯಲ್ಲಿ ರೈತರು, ಜಾತಿ, ಭಾಷೆ, ಕೋಮು, ಪ್ರಾದೇಶಿಕ ಬೇದ ಭಾವಗಳನ್ನು ತೊರೆದು ಅಂತಿಮ ಹೋರಾಟಕ್ಕೆ ಸಿದ್ದರಾಗುವ ಪ್ರಥಮ ಹೆಜ್ಜೆಯಾಗಿದೆ.

ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಆಶ್ರಯದಲ್ಲಿ ಹಲವಾರು ಜಿಲ್ಲೆಗಳಲ್ಲಿ ಸಣ್ಣ ಪ್ರಮಾಣಗಳ್ಲೂ ಅಂತೂ ರಾಜ್ಯದ ಎಲ್ಲ ಜಿಲ್ಲೆದಳಲ್ಲಿ ಈಚಳುವಳಿಯಲ್ಲಿ ರೈತರು ಧುಮುಕಿರುವುದು ಗಮನಾರ್ಹ.

ಬಲಿಷ್ಟ ಸಂಘಟನೆ ಇರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲ ತಾಲ್ಲೂಕುಗಳಲ್ಲಿ ಇಡೀ ಒಂದು ವಾರಗಳ ಕಾಲ ಸರ್ಕಾರಿ ಕಛೇರಿಗಳಲ್ಲಿ ರೈತರು ಸಾವಿರ ಸಾವಿರ ಸಂಖ್ಯೆಯಲ್ಲಿ ಭಾಗವಹಿಸಿ ಆರು ಸಾವಿರಕ್ಕೂ ಹೆಚ್ಚು ರೈತರು ಬಂಧನಕ್ಕೊಳಗಾಗಿದ್ದಾರೆ. ಈಗ ತಾನೆ ರೈತ ಸಂಘಟನೆಯು ಕರ್ನಾಟಕ ಪ್ರಾಂತ ರೈತ ಸಂಘದ ಆಶ್ರಯದಲ್ಲಿ ಬೆಳೆದು ಬರುತ್ತಿರುವ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿ ನೂರಾರು ರೈತರು ತಹಸೀಲ್ದಾರರ ಕಛೇರಿ ಪಿಕೆಟಿಂಗ್‌ನಲ್ಲಿ ಭಾಗವಹಿಸಿ ಐವತ್ತು ರೈತರು ಬಂಧನಕ್ಕೊಳಗಾಗಿದ್ದಾರೆ.

ರೈತ ಸಂಘದ ಬಲಿಷ್ಟವಾಗಿರುವ ಇನ್ನೊಂದು ಜಿಲ್ಲೆ ಕೋಲಾರದಲ್ಲಿ ಹತ್ತು ಸಾವಿರ ರೈತರು ಎಲ್ಲ ತಾಲ್ಲೂಕುಗಳಲ್ಲೂ ಪಿಕೆಟಿಂಗ್ ಕಾರ್ಯಕ್ರಮದಲ್ಲಿ ಭಾಗವಹಿಸಿಸುಮಾರುಐದುಸಾವಿರ ರೈತರು ಬಂಧನಕ್ಕೊಳಗಾಗಿದ್ದಾರೆ.

ಬಳ್ಳಾರಿ ರಾಯಚೂರು, ಗುಲ್ಬರ್ಗ, ಬಿಜಾಪುರ, ಧಾರವಾಡ ಜಿಲ್ಲೆಗಳಲ್ಲೂ ರೈತರು ಚಳುವಳಿಯಲ್ಲಿ ಉತ್ಸಾಹದಿಂದ ಭಾಗಿಗಳಾಗಲು ಗ್ರಾಮ ಗ್ರಾಮಗಳಿಂದ ರೈತರು ತಾಲ್ಲೂಕು ಕೇಂದ್ರಗಳಿಗೆ ಪ್ರಯಾಸಪಟ್ಟು ಬಂದು ಸೇರಿ ಸರ್ಕಾರಿ ಕಛೇರಿಗಳಲ್ಲಿ ಪಿಕೆಟಿಂಗ್ ನಡೆಸಿ ಐದು ಸಾವಿರ ರೈತರು, ಎರಡುವರೆ ಸಾವಿರ ರೈತರು, ಮತ್ತು ಒಂದು ಸಾವಿರ ರೈತರು ಹೀಗೆ ಅನುಕ್ರಮವಾಗಿ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾಗಿದ್ದಾರೆ.

ಕರ್ನಾಟಕದ ತುತ್ತ ತುದಿಯಲ್ಲಿರುವ ಬೆಳಗಾಂ ಜಿಲ್ಲೆ ಸೌಂದತ್ತಿಯಲ್ಲೂ ಬೀದರ್ ಜಿಲ್ಲೆಯಲ್ಲೂ, ಒಂದು ಸಾವಿರ ರೈತರು ಬಂಧನಕ್ಕೊಳಗಾಗಿದ್ದಾರೆ.

ಬೆಂಗಳೂರು, ತುಮಕೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಹಲವಾರು ತಾಲ್ಲೂಕುಗಳಲ್ಲಿ ಒಟ್ಟು ಎರಡು ಸಾವಿರ ರೈತರು ಬಂಧನಕ್ಕೊಳಗಾಗಿದ್ದಾರೆ. ಬೆಂಗಳೂರಿನಲ್ಲಿ ರಾಜಭವನದೆದುರು ರೈತರು ಕಾರ್ಮಿಕರು ವಿದ್ಯಾರ್ಥಿಗಳು ಮಹಿಳೆಯರು ಹಾಗೂ ವಕೀಲರು ಸೇರಿದಂತೆ ಸಾವಿರ ಮಂದಿ ಪಿಕೇಟಿಂಗ್ ನಡೆಸಿ ಸುಮಾರು ಆರು ನೂರು ಜನರು ಬಂಧನಕ್ಕೊಳಗಾಗಿದ್ದಾರೆ.

ರಾಜ್ಯದ ದಕ್ಷಿಣದ ಕೊನೆ ಕೊಡಗು ಮೈಸೂರು ಜಿಲ್ಲೆಗಳಲ್ಲೂ ರೈತರು ಕೆಲವು ತಾಲ್ಲೂಕು ಕೇಂದ್ರಗಳಲ್ಲಿ ಚಳುವಳಿಯಲ್ಲಿ ಭಾಗವಹಿಸಿ ಸುಮಾರು ಇನ್ನೂರು ರೈತರು ಬಂಧನಕ್ಕೊಳಗಾಗಿದ್ದಾರೆ.

ರೈತ ಸಂಘವುಇನ್ನೂ ಬೆಳೆದು ಬರುತ್ತಿರುವ ಜಿಲ್ಲೆಗಳಾದ ಹಾಸನ ಚಿಕ್ಕಮಗಳೂರು ಶಿವಮೊಗ್ಗ ಉತ್ತರ ಕನ್ನಡ ಇತ್ಯಾದಿ ಜಿಲ್ಲೆಗಳಲ್ಲೂ ರೈತರು ಪಿಕೆಟಿಂಗ್ ನಡೆಸಿ ನೂರಾರು ಸಂಖ್ಯೆಯಲ್ಲಿ ಬಂಧಿತರಾಗಿರುವ ವರದಿಗಳು ಬರುತ್ತಿವೆ.

ಕರ್ನಾಟಕದ ಎಲ್ಲಾ 19 ಜಿಲ್ಲೆಗಳಲ್ಲಿ
40 ಸಾವಿರ ಜನ ರೈತರು ಕೃಷಿ ಕಾರ್ಮಿಕರು
ಪಿಕೆಟಿಂಗ್‌ನಲ್ಲಿ ಭಾಗವಹಿಸಿದ್ದಾರೆ.
25 ಸಾವಿರ ಜನ ಬಂಧನಕ್ಕೊಳಗಾಗಿದ್ದಾರೆ.

ರಾಜ್ಯಾದ್ಯಂತ ಈ ಚಳುವಳಿಯ ಸಿದ್ದತೆಗಾಗಿ ಗ್ರಾಮ ಗ್ರಾಮಗಳಲ್ಲಿ ಸಭೆಗಳನ್ನು ನಡೆಸಲಾಗಿದೆ, ಕಾಲ್ನಡೆ ಜಾಥಾ, ಸೈಕಲ್ ಜಾಥಾ, ಜೀಪ್ ಪ್ರಚಾರಗಳು ನಡೆದಿವೆ ವಿಪುಲವಾಗಿ ರೈತರ ಬೇಡಿಕೆಗಳನ್ನೊಳಗೊಂಡ ಕರಪತ್ರ ಭಿತ್ತಿ ಪತ್ರಗಳನ್ನು ಹಾಕಲಾಗಿದೆ. ಬ್ಯಾಡ್ಜ, ಹೋರಾಟ ಮಾಡಲಾಗಿದೆ.

ಈ ಹೋರಾಟಕ್ಕೆ ರಾಜ್ಯದ ಸಿ.ಐ.ಟಿ.ಯು, ಎಸ್ ಎಫ್.ಐ. ಡಿ.ವೈ.ಎಫ್.ಐ, ಸಮುದಾಯ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಅಧಿಕ ಸಂಖ್ಯೆಯಲ್ಲಿ ಬೆಂಬಲ ನೀಡಿ, ಸಹಕರಿಸಿ, ಭಾಗಿಗಳಾಗಿದ್ದಾರೆ. ಮತ್ತು ಚಳುವಳಿಯನ್ನು ಯಶಸ್ವಿ ಗೊಳಿಸಿದ್ದಾರೆ. ಇವರೆಲ್ಲರಿಗೂ ಕರ್ನಾಟಕ ಪ್ರಾಂತ ರೈತ ಸಂಘವು ಅಭಿನಂದನೆ ಸಲ್ಲಿಸುತ್ತದೆ.

ಒಟ್ಟನಲ್ಲಿ ಇಡೀ ರಾಜ್ಯದಲ್ಲಿ ಇಪ್ಪತ್ತೈದು ಸಾವಿರ ರೈತ ಸದಸ್ಯರು ಬಂಧನಕ್ಕೊಳಗಾಗಿದ್ದಾರೆ. ಕೆಲವು ಸರ್ಕಾರದ ಅಧಿಕಾರಿಗಳು ರೈತರ ಮೇಲೆ ದಬ್ಬಾಳಿಕೆ ನಡೆಸಿದ್ದಾರೆ. ಬಂಧನಕ್ಕೊಳಪಡಿಸಿ ರೈತರನ್ನು ಜೈಲಿಗೆ ತಳ್ಳಿ ಕಟ್ಟಳೆಗಳನ್ನು ನಡೆಸುತ್ತಿದ್ದಾರೆ ಇದು ಖಂಡನೀಯ.

ಎಂ. ಎನ್. ಉಗ್ರಪ್ಪ

ದ. ಕ. ಜಿಲ್ಲೆ

ಜಿಲ್ಲೆಯ ವಿವಿಧ ತಾಲ್ಲೋಕುಗಳಲ್ಲಿ ನಡೆದ ಪಿಕೆಟಿಂಗ್‌ನಲ್ಲಿ 6141 ಮಂದಿ ರೈತ ಕಾರ್ಮಿಕ ವಿದ್ಯಾರ್ಥಿ ಯುವಜನರು ಪಿಕೆಟಿಂಗ್‌ನಲ್ಲಿ ಬಂಧನಕ್ಕೊಳಗಾಗಿದ್ದಾರೆ. ಪ್ರತಿ ತಾಲ್ಲೋಕಿನಲ್ಲಿ ಒಂದೊಂದು ದಿನದಂತೆ 7ತಾಲ್ಲೋಕುಗಳಲ್ಲಿ ಪಿಕೆಟಿಂಗ್ ಯಶಸ್ವಿಗೊಂಡಿದೆ.

ಮಂಗಳೂರು

ಮಂಗಳೂರಿನಲ್ಲಿ ಸೆಪ್ಟೆಂಬರ್ 11 ರಂದು ಜಿಲ್ಲಾ ಕಛೇರಿಯನ್ನು ಪಿಕೆಟಿಂಗ್ ನಡೆಸಿ 1700 ಮಂದಿ ರೈತ ಕೃಷಿಕೂಲಿಗಾರ ವಿದ್ಯಾಥಿಯುವಜನರು ಬಂಧನಕ್ಕೊಳಗಾಗಿದ್ದಾರೆ.ರೈತ ಸಂಘದ ಅಧ್ಯಕ್ಷ ಕಾ|ಕೆ.ಆರ್.ಶ್ರೀಮಾನ್, ಕಾರ್ಯದರ್ಶಿ, ಕಾ||ಅಬ್ರಹಾಂಕರ್ಕಡ. ಸಿ.ಐ.ಟಿ.ಯು. ಜಿಲ್ಲಾ ಕಾರ್ಯದರ್ಶಿ ಕಾ||ಮೂಸಬ್ಬ, ರೈತ ನಾಯಕರಾದ ಕಾ|ಜನಾರ್ಧನನ್ಯಾಕ್,ಬಿ.ಲೋಕಯ್ಯ ಕಮಲಾಕ್ಷಬಂಗೇರ, ಡೇವಿಡ್‌ಕರ್ಕಡ ರಾಮಚಂದ್ರ ಉಚ್ಚಿಲ್, ಪಿ.ಬಾಬು, ಹಾಗೂ ಕಾ|ಬಿ.ವಿಷ್ಣುಮೂರ್ತಿ ಮುಂದಾಳತ್ವ ವಹಿಸಿದ್ದರು. ನಂತರ ನಡೆದ ಸಭೆಯನ್ನುದ್ದೇಶಿಸಿ ಕಾ|ಕೆ.ಆರ್ ಶ್ರೀಯಾನ್ ಮಾತನಾಡಿದರು. ದ.ಕ. ಜಿಲ್ಲೆಯ ವಿವಿಧ ತಾಲೋಕುಗಳಲ್ಲಿ ಪಿಕೆಟಿಂಗ್ ಕಾರ್ಯಕ್ರಮವನ್ನು ಯಶಸ್ವಿ ಮಾಡಿದ ಎಲ್ಲರಿಗೂ ರೈತ ಸಂಘದ ಜಿಲ್ಲಾ ಪ್ರ ಕಾರ್ಯದರ್ಶಿ ಕಾ|| ಅಬ್ರಹಾಂಕರ್ಕಡ ಅಭಿನಂದಿಸಿದ್ದಾರೆ.

ಕುಂದಾಪುರ

ಸೆಪ್ಟೆಂಬರ್ 8 ರಂದು ಸುಮಾರು 2,500ಕ್ಕೂ ಹೆಚ್ಚು ರೈತ ಕೃಷಿಕೂಲಿಗಾರರು, ಕಾರ್ಮಿಕರು ತಾಲ್ಲೋಕು ಕಛೇರಿ ಪಿಕೆಟಿಂಗ್ ಮಾಡಿ ಬಂಧನಕ್ಕೊಳಗಾದರು. ಬಂಧಿತರಲ್ಲಿಸುಮಾರು 500 ಮಹಿಳೆಯರಾಗಿದ್ದರು. ಕಾ|| ದಾಸಭಂಡಾರಿ, ಶಿವರಾಮಶೆಟ್ಟಿ, ಗೋವಿಂದಶೆಟ್ಟಿಗಾರ, ಕಾರ್ಮಿಕ ನಾಯಕ ಕಾ||ಶಂಕರ್,ಸಿ.ನಾರಾಯಣ ನರಸಿಂಹ ಹಾಗೂ ವಿದ್ಯಾರ್ಥಿ ಯುವ ನಾಯಕರಾದ ಕಾ||ಕೆ.ವಿಶ್ವನಾಥ, ಮಹಾಬಲರವರು ನೇತೃತ್ವನೀಡಿದ್ದರು.

ಉಡುಪಿ

ಸೆಪ್ಟೆಂಬರ್ 9 ರಂದು ರೈತ ಕೃಷಿ ಕೂಲಿಗಾರರು ಕಾರ್ಮಿಕರುತಾಲ್ಲೋಕು ಕಛೇರಿ ಪಿಕೆಟಿಂಗ್ ಮಾಡಿ 613 ಮಂದಿ ಬಂಧನಕ್ಕೊಳಗಾದರು. ಪಿಕೆಟಿಂಗ್‌ಗೆ ಪೂರ್ವಭಾವಿಯಾಗಿ ತಾಲ್ಲೋಕಿನಾದ್ಯಂತ ಪ್ರಚಾರ ಸಭೆ ನಡೆಸಲಾಗಿತ್ತು. ಪಿಕೆಟಿಂಗ್ ನೇತೃತ್ವವನ್ನು ಕಾ|ಡೇವಿಡ್‌ಕರ್ಕಡ, ಶ್ಯಾಮಶೆಟ್ಟಿ, ಗುಡ್ಡಪ್ಪಜಾರಿ, ಕುರುಂಬಿಲ ಪೂಜಾರಿ, ಕೆ.ಲಕ್ಷಣ,ಪ್ರಭಾಕರನಾಯ್ಕ ಕಾರ್ಮಿಕ ನಾಯಕ ಕಾ||ಸಾಧು ಅಮೀನ, ದೂಗುನಾಯ್ಕ, ಶೇಖರ ಪೂಜಾರಿ, ಡಿ.ವೈ.ಎಫ್.ಐ.ನ ಕಾ| ರಮೇಶಮೆಂಡನ್ ಮುಂತಾದವರು ವಹಿಸಿದ್ದರು.

ಸುಳ್ಯ–ಪುತ್ತೂರು

ಸುಳ್ಯದಲ್ಲಿ ರೈತ ಸಂಘದ 500 ಕಾರ್ಯಕರ್ತರು ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾಗಿದ್ದಾರೆ. ಪುತ್ತೂರಿನಲ್ಲಿ 113 ಮಂದಿ ಬಂಧನಕ್ಕೊಳಗಾದ ವರದಿಯಾಗಿದೆ.

ಬೆಳ್ತಂಗಡಿ

ಸೆಪ್ಟೆಂಬರ್ 7 ರಂದು ತಾಲ್ಲೋಕು ಕಛೇರಿಯನ್ನು ಸುಮಾರು 500 ಮಂದಿ ರೈತ ಕಾರ್ಮಿಕ ಸ್ವಯಂ ಸೇವಕರು ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು. ನಂತರ ಬಸ್‌ಸ್ಟಾಂಡಿನಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾ||ಮಥಾಯಿ. ಲಕ್ಷ್ಮಣಗೌಡ, ದೇವಾನಂದ್, ಬಿ.ವಿಷ್ಣುಮೂರ್ತಿ ಜಿಲ್ಲಾಕಾರ್ಯದರ್ಶಿ ಕಾ||ಅಬ್ರಹಾಂ ಕರ್ಕಡರವರುಗಳು ಮಾತನಾಡಿ ರೈತ ಕೃಷಿಕೂಲಿಗಾರರ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿದರು.

ಬಂಟ್ವಾಳ

ಸೆಪ್ಟೆಂಬರ್ 10ರಂದು ತಾಲ್ಲೋಕು ಕಛೇರಿಯನ್ನು ರೈತ ಸಂಘದ ಕಾರ್ಯಕರ್ತರು ಪಿಕೆಟಿಂಗ್ ಮಾಡಿ 350 ಮಂದಿ ಬಂಧನಕ್ಕೊಳಗಾದರು. ನಂತರ ನಡೆದ ಬಹಿರಂಗ ಸಭೆಯಲ್ಲಿ ರೈತ ಸಂಘದ ಕಾರ್ಯದರ್ಶಿ ಕಾ||ಬಿ.ನಾರಾಯಣ, ವಾಸಗಟ್ಟಿ, ಜಿಲ್ಲಾ ಕಾರ್ಯದರ್ಶಿ ಕಾಂ||ಅಬ್ರಹಾಂಕರ್ಕಡರವರು ಮಾತನಾಡಿ ರೈತರ ಬಲಿಷ್ಟ ಸಂಘಟನೆಗಳ ಬೆಳೆಸಿ ತಮ್ಮ ಬೇಡಿಕೆಗಳಿಗೆ ಹೋರಾಟ ಮುಂದುವರಿಸಲು ಕರೆ ನೀಡಿದರು.

ಕೋಲಾರ ಜಿಲ್ಲೆ

ಜಿಲ್ಲೆಯಾದ್ಯಂತ ಸುಮಾರು 10 ಸಾವಿರದಷ್ಟು ರೈತರು ಪಿಕೆಟಿಂಗ್‌ನಲ್ಲಿ ಭಾಗವಹಿಸಿ 4423 ರೈತರು ಬಂಧನಕ್ಕೊಳಗಾದ ವರದಿಯಾಗಿದ್ದು ತಾಲೋಕುವಾರು ಇಲ್ಲಿ ನೀಡಲಾಗಿದೆ.

ಮುಳಬಾಗಿಲು

ತಾಲ್ಲೋಕಿನಲ್ಲಿ ಅತ್ಯಂತ ಉತ್ಸಾಹದಾಯಕ ರೀತಿಯಲ್ಲಿ ರೈತರು ಭಾಗವಹಿಸಿದ ವರದಿಯಾಗಿದ್ದು 7ರಿಂದ 11 ರವರೆವಿಗೂ ತಹಶೀಲ್ದಾರ್, ಬಿ.ಡಿ.ಓ. ಕೆ.ಇ.ಬಿ, ಬ್ಯಾಂಕ್ ಪಿ.ಡಬ್ಲ್ಯು.ಡಿ ಕಛೇರಿ ಪಿಕೆಟಿಂಗ್‌ನಲ್ಲಿ 4800 ರೈತರು ಭಾಗವಹಿಸಿ 1631 ರೈತರು ಬಂಧನಕ್ಕೊಳಗಾಗಿದ್ದಾರೆ. ಸಿ.ಪಿ.ಐ. (ಎಂ) ಪಕ್ಷದ ಮುಳಬಾಗಲು ಶಾಸಕರಾದ

(6ನೇ ಪುಟ ನೋಡಿ)

ಆಂಧ್ರ : 3 ಲಕ್ಷ 30 ಸಾವಿರ ಜನರಿಂದ ಪಿಕೆಟಿಂಗ್

ಕಿಸಾನ್ ಸಭಾದ ಸೆಪ್ಟೆಂಬರ್ ಚಳವಳಿ ಆಂಧ್ರದಾದ್ಯಂತ ಅತ್ಯಂತ ಯಶಸ್ವಿಯಾಗಿ ನಡೆಯಿತು. ರಾಜ್ಯದಲ್ಲಿ ಒಟ್ಟು 3 ಲಕ್ಷ 30 ಸಾವಿರ ರೈತರು ಪಿಕೆಟಿಂಗ್‌ನಲ್ಲಿ ಪಾಲ್ಗೊಂಡಿದ್ದಾರೆ. ಕಾರ್ಯಕ್ರಮದಲ್ಲಿ ಭಾಗವಹಿಸಿ ಬಂಧನಕ್ಕೊಳಗಾದ ಮಹಿಳೆಯರ ಸಂಖ್ಯೆಯೇ 60 ಸಾವಿರ ಮೀರುತ್ತದೆ. ರೈತರ ಹೋರಾಟಕ್ಕೆ ಸೌಹಾದರ್ಯ ಬೆಂಬಲ ನೀಡಿ 10 ಸಾವಿರ ಕಾರ್ಮಿಕರು ಪಾಲ್ಗೊಂಡಿದ್ದಾರೆ. ಒಟ್ಟು 5 ಸಾವಿರ ಗ್ರಾಮಗಳಿಂದ 80,000 ಜನರು ಬಂಧನಕ್ಕೆ ಒಳಗಾಗಿದ್ದಾರೆ. ಖಮ್ಮಂ ಜಿಲ್ಲೆಯೊಂದರಲ್ಲೇ ಸೆಪ್ಟೆಂಬರ್ 7 ರಂದು ಕೇವಲ ಮಹಿಳೆಯರಿಂದಲೇ ನಡೆದ ಪಿಕೆಟಿಂಗ್ ಕಾರ್ಯಕ್ರಮದಲ್ಲಿ 20,000 ಮಹಿಳೆಯರು ಭಾಗವಹಿಸಿದ್ದು ಒಂದು ಅಪೂರ್ವ ಘಟನೆಯಾಗಿದೆ. ರಾಜ್ಯದಾದ್ಯಂತ ಒಟ್ಟು 60,000 ಮಹಿಳೆಯರು ಪಿಕೆಟಿಂಗ್‌ನಲ್ಲಿ ಭಾಗವಹಿಸಿರುವುದಾಗಿ ಪಕ್ಷದ ಮುಖ ಪತ್ರಿಕೆಯಾದ "ಪ್ರಜಾಶಕ್ತಿ" ವರದಿಮಾಡಿದೆ. ರಾಜ್ಯದ 18 ಜಿಲ್ಲಾ ಕೇಂದ್ರಗಳಲ್ಲಿ ಮತ್ತು 400 ಮಂಡಲಗಳಲ್ಲಿ ಪಿಕೆಟಿಂಗ್ ನಡೆಸಲಾಗಿದ್ದು 8 ಕಡೆಗಳಲ್ಲಿ ಪೋಲೀಸರು ಲಾಠೀಚಾರ್ಜ ನಡೆಸಿದ್ದಾರೆ. ಪ್ರಕಾಶಂ ಜಿಲ್ಲೆಯಲ್ಲಿ ನಡೆದ ಪಿಕೆಟಿಂಗ್ ಸಮಯದಲ್ಲಿ ಗೋಡೆಯೊಂದು ಉರುಳಿ ಬಿದ್ದು ಓರ್ವ ಕಾರ್ಯಕರ್ತ ಮೃತಪಟ್ಟಿದ್ದಾರೆ.

ನಾಯಕರ ಮೇಲೆ ಲಾಠಿ ಚಾರ್ಜ್

ಸಿ.ಪಿ.ಐ. (ಎಂ) ಕೇಂದ್ರ ಸಮಿತಿ ಸದಸ್ಯರಾದ ಕಾಂ. ನಂದೂರಿ ಪ್ರಸಾದರಾವ್‌ರವರು, ಆಂಧ್ರ ಪ್ರದೇಶ ಕೃಷಿ ಕಾರ್ಮಿಕ ಸಂಘಟನೆಯ ಕಾರ್ಯದರ್ಶಿ ಹಾಗೂ ಶಾಸಕ ಮೋಟೂರು ರಾಮಯ್ಯನವರ ಮೇಲೆ ಆಂಧ್ರ ಪೋಲಿಸರು ಲಾಠಿ ಚಾರ್ಜ್ ಮಾಡಿದ್ದಾರೆ. ಆಂಧ್ರ ಪ್ರದೇಶ ಸರ್ಕಾರದ ಸಚಿವಾಲಯ ಅಲ್ಲಿನ ವಿಧಾನ ಸೌಧದ ಪಿಕೆಟಿಂಗ್ ಮಾಡುತ್ತಿದ್ದಾಗ ವಿವೇಚನಾ ಹಿತವಾಗಿ ಲಾಠಿ ಚಾರ್ಜ್ ಮಾಡಿದ್ದರಿಂದ ತೀವ್ರವಾದ ಗಾಯಗಳಾಗಿವೆ. ಇವರ ಜೊತೆಯಲ್ಲಿದ್ದ ಅನೇಕ ಮಂದಿ ರೈತರು, ಮಹಿಳೆಯರಿಗೆ ಗಾಯಗಳಾಗಿವೆ.

"ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂ"

- ಎಲ್ಲರಿಗೂ ಶಿಕ್ಷಣ ಎಲ್ಲರಿಗೂ ಉದ್ಯೋಗ
- ಉದ್ಯೋಗ ಸಿಗುವ ತನಕ ನಿರುದ್ಯೋಗ ಭತ್ಯೆ ನೀಡಿ
- ಹೊಸ ಆರ್ಥಿಕ ನೀತಿ-ಹೊಸ ಶಿಕ್ಷಣ ನೀತಿ ತೊಲಗಲಿ.

ಈ ಘೋಷ ಇಡೀ ದೇಶದಲ್ಲಿ ಮೊರ್ಮೊಳಗುವ ದಿನ ದೂರ ವಿಲ್ಲ ಸೆ.23 ರಂದು ಒಂದು ಲಕ್ಷ ಯುವಕ ಯುವತಿಯರು, ವಿದ್ಯಾರ್ಥಿಗಳು ದೆಹಲಿಯಲ್ಲಿ ನೆರೆಯಲಿದ್ದಾರೆ. ಇಡೀ ದೇಶದ ಯುವಜನರ ವಿದ್ಯಾರ್ಥಿಗಳ ಮುಂಚೂಣಿಯ ಜನ ಇವರು. ಈ ಲಕ್ಷ ಕಂಠಗಳಿಂದ ಒಕ್ಕೊರಲ ಘೋಷ ಹೊರ ಹೊಮ್ಮಲಿದೆ.

- ರಾಜೀವ್‌ಗಾಂಧಿಯವರೇ ರಾಜೀನಾಮೆ ನೀಡಿ-ಮಧ್ಯಂತರ ಚುನಾವಣೆ ನಡೆಸಿ
- ಭ್ರಷ್ಟಾಚಾರ ತೊಲಗಲಿ.

ಕೇಂದ್ರ ಸರ್ಕಾರ ಈಗ ಜಾರಿಗೊಳಿಸಿರುವ ಹೊಸ ಶಿಕ್ಷಣ ನೀತಿ ಇದ್ದುಳ್ಳವರ ಪರವಾಗಿದ್ದಾಗಿದೆ ಎನ್ನುವುದು ಅದರ ಒಳ ಹೂರಣವನ್ನು ಕೆದಕಿದಾಗ ಸ್ಪಷ್ಟವಾಗುತ್ತದೆ. 'ನವೋದಯ ಶಾಲೆಗಳು' 'ಸ್ವಾಯತ್ತ ಕಾಲೇಜುಗಳು' 'ಆಪರೇಷನ್ ಬ್ಲಾಕ್‌ಬೋರ್ಡ್'ತೆರೆದ ವಿಶ್ವವಿದ್ಯಾನಿಲಯಗಳು' 'ಸೆಂಟರ್ ಆಫ್ ಎಕ್ಸಲೆನ್ಸ್'-ಹೀಗೆ ಹಲವಾರು ಪದಪುಂಜಗಳು ಹೊಸಶಿಕ್ಷಣ ನೀತಿಯ ಬೆನ್ನ ಹಿಂದೆ ನೋಕೆಯೊಡೆದಿವೆ. ಕ್ರಾಂತಿಕಾರಕ ಬದಲಾವಣೆ ಶಿಕ್ಷಣ ಕ್ಷೇತ್ರದಲ್ಲಿ ಮೂಡಿಬರುತ್ತಿದೆ ಎಂಬ ಭ್ರಮೆಯನ್ನು ಇವು ಸೃಷ್ಟಿಸಿವೆ. ಈಗಾಗಲೇ ಆಳುವ ವರ್ಗದ ಪರ ಬುದ್ಧಿಜೀವಿಗಳು ಇದರ ಪರ ವಕಾಲತ್ತು ವಹಿಸಿ ಮಾತನಾಡುತ್ತಿರುವುದನ್ನೂ ನಾವು ಕಾಣಬಹುದು. ಸೂಕ್ಷ್ಮವಾಗಿ ಈ ಬಗ್ಗೆ ಈ ಕೆಳಗೆ ವಿಮರ್ಶಿಸಲಾಗಿದೆ.

ಆಪರೇಷನ್ ಬ್ಲಾಕ್ ಬೋರ್ಡ್

ಕರಿ ಹಲಗೆಯಿಂದ ಮೊದಲ್ಗೊಂಡು ಎಲ್ಲಾ ಅಗತ್ಯ ಸೌಲಭ್ಯಗಳನ್ನು ರಾಷ್ಟ್ರದ ಎಲ್ಲಾ ಶಾಲೆಗಳಿಗೂ ಈ ಯೋಜನೆ ಅನ್ವಯ ಒದಗಿಸಲಾಗುವುದೆಂದು ಸರಕಾರ ಹೇಳುತ್ತದೆ. ನಿಜಕ್ಕೂ ಜಾರಿಯಾದಲ್ಲಿ ಇದು ಸ್ವಾಗತಾರ್ಹ ಅಂಶವೇ ಆಗಿದೆ. ಆದರೆ ವಾಸ್ತವದಲ್ಲಿ ಸ್ಥಿತಿ ಏನು ? ತನ್ನ ಹೊಸ ಶಿಕ್ಷಣ ನೀತಿ ಶ್ರೀಮಂತ ಪರವಾದದ್ದು ಎನ್ನುವುದನ್ನು ಮುಚ್ಚಿಡಲು ಸರ್ಕಾರ ಈ ಘೋಷಣೆ ಮೊಳಗಿಸಿದೆ. ('ಗರೀಬಿ ಹಟಾವೋ' ಘೋಷಣೆಯಂತೆ). 1986-87 ರ ಬಜೆಟ್‌ನಲ್ಲಿ 352 ಕೋಟಿ ಹಣವನ್ನು ಶಿಕ್ಷಣಕ್ಕೆ ಇರಿಸಲಾಗಿದೆ. ಈ ವರ್ಷ ಅದನ್ನು 825 ಕೋಟಿಗೆ ಏರಿಸಲಾಗಿದೆ. ಏನಿದು ಸವಾಡ ಎನ್ನಬೇಡಿ ! ಈ ಮೀಸಲಿಟ್ಟ ಹಣದಲ್ಲಿ ಬಹುಪಾಲು ಹಣ ಸೀಮಿತ ಜನಕ್ಕೆ (ಅದರಲ್ಲೂ ಉನ್ನತ ವರ್ಗದವರಿಗೆ) ಶಿಕ್ಷಣ ಒದಗಿಸುವ ಉನ್ನತ ಶಿಕ್ಷಣಕ್ಕೆ ಮಾತ್ರ ವಿನಿಯೋಗಿಸಲ್ಪಡುತ್ತದೆ ಎನ್ನುವುದನ್ನು ಗಮನಿಸಬೇಕು. ಆಪರೇಷನ್ ಬ್ಲಾಕ್ ಬೋರ್ಡ್ ಪ್ರಕಾರ ಶಾಲೆಗಳಿಗೆ 'ಪಕ್ಕಾ' ಕಟ್ಟಡ, ಉತ್ತಮ ಲೈಬ್ರರಿ, ಆಟೋಟ ಸಲಕರಣೆಗಳು ಇತ್ಯಾದಿ....ಇತ್ಯಾದಿ ಒದಗಿಸುತ್ತವೆ ಎನ್ನುವ ಕೇಂದ್ರ ಸರ್ಕಾರ ಆ ಬಗ್ಗೆ ನಿರ್ದಿಷ್ಟವಾಗಿ ಹಣವನ್ನೇ ಮೀಸಲಿರಿಸಿಲ್ಲ ! ಯೋಜನೆಯನ್ನೂ ರೂಪಿಸಿಲ್ಲ ! ಅದು ಈ ಬಗ್ಗೆ ವೆಚ್ಚ ಮಾಡಬಯಸಿರುವ ಹಣವನ್ನು ವಿತರಿಸಿದರೆ ಅದು ಶಾಲೆಯೊಂದಕ್ಕೆ ರೂ. 4086 ಮಾತ್ರ ದೊರೆಯುತ್ತದೆ. ಆದರೆ ಇದೇ ಸರ್ಕಾರ ಶ್ರೀಮಂತ ವರ್ಗಕ್ಕೆ ಶಿಕ್ಷಣ ಒದಗಿಸುವ 150 ನವೋದಯ ವಿದ್ಯಾಲಯಗಳಿಗಾಗಿ 69 ಕೋಟಿ ಹಣವನ್ನು ವ್ಯಯಿಸಲಿದೆ ಎಂದರೆ ಒಂದೊಂದಕ್ಕೂ ಸುಮಾರು 50 ಲಕ್ಷ ಹಣ ! 1990ರ ವೇಳೆಗೆ ಎಲ್ಲರಿಗೂ ಶಿಕ್ಷಣವನ್ನು ಈ ಯೋಜನೆಯನ್ವಯ ಒದಗಿಸುವುದಾಗಿ ಹೇಳಿರುವ ಕೇಂದ್ರ ಸರ್ಕಾರ ಈ ವರ್ಷ ಶೇಕಡ 1 ರಷ್ಟು ಶಾಲೆಗಳಿಗೂ ಘೋಷಿತ ಸೌಲಭ್ಯ ಒದಗಿಸಿಲ್ಲ. ಇದೀಗ ಕೇಂದ್ರದ ಆಪರೇಷನ್ ಬ್ಲಾಕ್ ಬೋರ್ಡ್ ಯೋಜನೆ !

> ಆದರೆ ಘನವಾದ ಕೇಂದ್ರ ಸರ್ಕಾರ ಇದಕ್ಕಾಗಿ ಮೀಸಲಿಟ್ಟ 18 ಕೋಟಿ ಹಣದಲ್ಲಿ ಕಳೆದ ವರ್ಷ ಒಂದು ಪೈಸೆಯನ್ನೂ ವ್ಯಯಿಸಿಲ್ಲ ! ವಯಸ್ಕರ ಶಿಕ್ಷಣಕ್ಕೆ ಕೇಂದ್ರ ಅದೆಷ್ಟು ಬದ್ಧವಾಗಿದೆ ಎನ್ನುವುದು ಇದರಿಂದ ಬಯಲಾಗುತ್ತದೆ. ಅಂತೆಯೇ ಶಿಕ್ಷಣವನ್ನು ಉದ್ಯೋಗ ಪರವನ್ನಾಗಿ ಮಾಡಲು ಮೀಸಲಿಟ್ಟ ಕೇವಲ 6.5 ಕೋಟಿ ಹಣದಲ್ಲಿ ಕಳೆದ ವರ್ಷ ಒಂದು ಪೈಸವನ್ನು ವ್ಯಯಿಸಿಲ್ಲ ! ಇದೇ ರೀತಿ ವಿಜ್ಞಾನದ ಪ್ರಗತಿ ಪೂರಕವಾದ ಪ್ರಯೋಗಾಲಯಗಳ ಉನ್ನತಿಗೆಂದು ಮೀಸಲಿರಿಸಿದ ಅಲ್ಪ ಪ್ರಮಾಣದ (ರೂ. 9.50 ಕೋಟಿ) ಹಣವನ್ನು ಸರ್ಕಾರ ವ್ಯಯಿಸದೆ ವ್ಯರ್ಥಗೊಳಿಸಿದೆ.

ವ್ಯಯಗೊಳ್ಳದಿರುವ ಮೀಸಲಿಟ್ಟ ಹಣ!

ಎಲ್ಲರಿಗೂ ಶಿಕ್ಷಣ ಒದಗಿಸುವುದಾಗಿ ಬೊಗಳೆ ಭರವಸೆ ಕೊಡುವ ಸರ್ಕಾರ ಕಳೆದ ವರ್ಷ ಶಿಕ್ಷಣಕ್ಕಾಗಿ ಮೀಸಲಾಗಿಟ್ಟ 352 ಕೋಟಿ ಹಣದಲ್ಲಿ 315 ಕೋಟಿಯನ್ನು ಮಾತ್ರ ವ್ಯಯಿಸಿತ್ತು! ಯಾವ ಮುಖ್ಯ ವಿಭಾಗದಲ್ಲಿ ಮೀಸಲಿಟ್ಟ ಹಣ ವ್ಯಯಿಸಲ್ಪಡದೆ ವ್ಯರ್ಥವಾಗಿದೆ ಗೊತ್ತೇ ? ವಯಸ್ಕರ ಶಿಕ್ಷಣ ದೊಡ್ಡ ಜನಾಂದೋಲನವಾಗಿ ಜಾರಿಗೊಂಡಾಗ ಮಾತ್ರ ನಮ್ಮ ದೇಶದಲ್ಲಿ ಸರ್ವರಿಗೂ ಶಿಕ್ಷಣ ಒದಗಿಸಲು ಸಾಧ್ಯವೆನ್ನುವುದು ಪ್ರಜ್ಞಾವಂತರೆಲ್ಲರಿಗೂ ತಿಳಿದಿರುವ ವಿಚಾರ. ಆದರೆ ಘನವಾದ ಕೇಂದ್ರ ಸರ್ಕಾರ ಇದಕ್ಕಾಗಿ ಮೀಸಲಿಟ್ಟ 18 ಕೋಟಿ ಹಣದಲ್ಲಿ ಕಳೆದ ವರ್ಷ ಒಂದು ಪೈಸೆಯನ್ನೂ ವ್ಯಯಿಸಿಲ್ಲ ! ವಯಸ್ಕರ ಶಿಕ್ಷಣಕ್ಕೆ ಕೇಂದ್ರ ಅದೆಷ್ಟು ಬದ್ಧವಾಗಿದೆ ಎನ್ನುವುದು ಇದರಿಂದ ಬಯಲಾಗುತ್ತದೆ. ಅಂತೆಯೇ ಶಿಕ್ಷಣವನ್ನು ಉದ್ಯೋಗ ಪರವನ್ನಾಗಿ ಮಾಡಲು ಮೀಸಲಿಟ್ಟ ಕೇವಲ 6.5 ಕೋಟಿ ಹಣದಲ್ಲಿ ಕಳೆದ ವರ್ಷ ಒಂದುಪೈಸೆಯನ್ನೂ ವ್ಯಯಿಸಿಲ್ಲ! ಇದೇ ರೀತಿ ವಿಜ್ಞಾನದ ಪ್ರಗತಿ ಪೂರಕವಾದ ಪ್ರಯೋಗಾಲಯಗಳ ಉನ್ನತಿಗೆಂದು ಮೀಸಲಿರಿಸಿದ ಅಲ್ಪಪ್ರಮಾಣದ (ರೂ. 9.50 ಕೋಟಿ) ಹಣವನ್ನು ಸರಕಾರ ವ್ಯಯಿಸದೆ ವ್ಯರ್ಥಗೊಳಿಸಿದೆ. ಹೊಸ ಶಿಕ್ಷಣ ನೀತಿಯ ಬಗ್ಗೆ ಉದ್ದುದ್ದ ಮಾತನಾಡುವ ಕೇಂದ್ರ ಸರ್ಕಾರದ ಅಪ್ರಾಮಾಣಿಕತೆ ಮೇಲಿನ ಉದಾಹರಣೆಗಳಿಂದ ಸ್ಪಷ್ಟವಾಗುತ್ತದೆ.

> **ಕಳೆದ ಬಜೇಟಿನಲ್ಲಿ ಶಿಕ್ಷಕರ ನೇಮಕಾತಿಗಾಗಿ 4.65 ಕೋಟಿ ಹಣ ಮೀಸಲಿಟ್ಟಿದ್ದರೆ ಈ ಬಾರಿ ಮೀಸಲಿಟ್ಟ ಹಣ ರೂ.0.00-!**

ನವೋದಯ ವಿದ್ಯಾಲಯಗಳು

ಇದು ಹೊಸ ಶಿಕ್ಷಣ ನೀತಿಯ ಇನ್ನೊಂದು ಮಂತ್ರ! ಇದನ್ನು ಬಡವರಿಗಾಗಿಯೇ ರೂಪಿಸಲಾಗಿದೆ ಎಂದು ಸರಕಾರ ಠಾಂಠಾಂ ಮಾಡುತ್ತಿದೆ! ಇದರಷ್ಟು ಅಪ್ಪಟಸುಳ್ಳು ಇನ್ನೊಂದು ಇರಲು ಸಾಧ್ಯವಿಲ್ಲ.

ನವೋದಯ ಶಾಲೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ತೆರೆಯಲ್ಪಡಬಹುದು. ಇದರಿಂದಾಗಿ ಗ್ರಾಮೀಣ ಮಕ್ಕಳಿಗೆ ಇಲ್ಲಿ ಸಿಗಲಿದೆ ಎಂದು ಸರಕಾರದ ವಾದ. ಆದರೆ ಪ್ರಶ್ನೆ ಇರುವುದು ಗ್ರಾಮ ಮತ್ತು ಪೇಟೆಯ ನಡುವಿನ ವೈರುದ್ಧ್ಯದಲ್ಲಲ್ಲ. ಶ್ರೀಮಂತರು ಮತ್ತು ಬಡವರ ನಡುವಿನ ಪ್ರಶ್ನೆ ಮುಖ್ಯ. ನವೋದಯ ಶಾಲೆಗಳಲ್ಲಿ ಪ್ರವೇಶ ಮಾಧ್ಯಮಿಕ ಶಾಲೆಗಳಿಂದ ಆರಂಭ. ಆದರೆ ಭಾರತದ ಈಗಿನ ಸ್ಥಿತಿಯಲ್ಲಿ 56.1 ಶೇಕಡ ವಿದ್ಯಾರ್ಥಿಗಳು ಈ ಹಂತ ತಲುಪುವ ಮೊದಲೇ ಶಾಲೆಗೆ ಬೆನ್ನು ತಿರುಗಿಸಿರುತ್ತಾರೆ. ಇಷ್ಟೊಂದು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಶಾಲೆ ತೊರೆಯಲು ಮುಖ್ಯ ಕಾರಣ ತಾಯಿ ತಂದೆಗಳ ಆರ್ಥಿಕ ಸ್ಥಿತಿಗತಿ. ಬಡತನ ಇದ್ದುಳ್ಳ ವರ್ಗದ ಮಕ್ಕಳು ಮಾತ್ರ ಮಾಧ್ಯಮಿಕ ಹಂತ ತಲುಪುತ್ತಾರೆ. ಇವರಲ್ಲಿ ಸ್ಪರ್ಧಿಸಿ ಪ್ರವೇಶ ಪಡೆಯುವ ಕೆಲವೇ ಮಂದಿ ನವೋದಯ ಶಾಲೆಗಳನ್ನು ಪ್ರವೇಶಿಸುತ್ತಾರೆ. ಅಂದರೆ ಈ ಶಾಲೆಗಳು ಯಾವ ಬಡವರ ಉದ್ಧಾರಕ್ಕಾಗಿ? ಬಡವರಹೆಸರಿನಲ್ಲಿ ಶ್ರೀಮಂತರಿಗೆ ಇದರಿಂದ ಸೇವೆ. ಈ ನವೋದಯ ಶಾಲೆಗಳು ಆಳುವ ವರ್ಗದ ಹಿತರಕ್ಷಿಸಬಲ್ಲ ಶಿಕ್ಷಣನೀಡಬಲ್ಲಕೇಂದ್ರಗಳಾಗಲಿವೆ. ಸರಕಾರಕ್ಕೆ ನಿಜಕ್ಕೂ ಶಿಕ್ಷಣ ಪ್ರಸರಿಸುವ ಉದ್ದೇಶವಿದ್ದರೆ ಶಾಲೆಗಳೇಇಲ್ಲದ ದೇಶದ 1.60.000 ಪ್ರದೇಶಗಳಲ್ಲಿ ಶಾಲೆಗಳನ್ನು ಆರಂಭಿಸಲಿ. 1.65 ಲಕ್ಷದಷ್ಟಿರುವ ಏಕೋಪಾಧ್ಯಾಯ ಶಾಲೆಗಳಿಗೆ ಕನಿಷ್ಟ ಇನ್ನೊಬ್ಬ ಶಿಕ್ಷಕರನ್ನಾದರೂ ಒದಗಿಸಲಿ. ಇಲ್ಲ! ಸರಕಾರ ಇದಕ್ಕೆ ಹಣ ವ್ಯಯಿಸಲು ಸಿದ್ಧವಿಲ್ಲ. ಸರಕಾರದ ದೃಷ್ಟಿಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಹಣ ವ್ಯಯಿಸುವುದರಿಂದ ಯಾವ 'ಲಾಭವೂ' ಇಲ್ಲ. ಇದು ಅನುತ್ಪಾದಕ ವೆಚ್ಚ'! ಕಳೆದ ಬಜೆಟಿನಲ್ಲಿ ಶಿಕ್ಷಕರ ನೇಮಕಾತಿಗಾಗಿ4.65ಕೋಟಿ ಹಣ ಮೀಸಲಿಟ್ಟದ್ದರೆ ಈ ಬಾರಿ ಮೀಸಲಿಟ್ಟ ಹಣ ರೂ.0.00-! ಒಬ್ಬ ಶಿಕ್ಷಕನನ್ನೂ ನೇಮಿಸಲಾಗುವುದಿಲ್ಲ. ನಿವೃತ್ತರಾದ ಶಿಕ್ಷಕ ಸ್ಥಾನವನ್ನು ಭರ್ತಿಗೊಳಿಸುವ ಇರಾದೆಯೂ ಇಲ್ಲ!.

ಬಡ ಶಿಕ್ಷಕರು ವೇತನ ಹೆಚ್ಚಳಕ್ಕೆ ಒತ್ತಾಯಿಸಿದರೆ ನಿರ್ದಾಕ್ಷಿಣ್ಯವಾಗಿ ಇಲ್ಲವೆನ್ನುವ ಸರಕಾರ 'ಇಂದಿರಾಗಾಂಧಿ ರಾಷ್ಟ್ರೀಯ ಕೇಂದ್ರಕ್ಕೆ' ಬಜೆಟಿನಲ್ಲಿ ಕಾದಿರಿಸಲಾದ 0.94 ಕೋಟಿ ಹಣವನ್ನು ಮೀರಿ 26.5 ಕೋಟಿ ಹಣವನ್ನು ಕಳೆದಬಜೆಟಿನಲ್ಲಿ ವ್ಯಯಿಸಿತ್ತು.

ಸ್ವಾಯತ್ತ ಕಾಲೇಜುಗಳು

'ಸೆಂಟರ್ ಆಫ್ ಎಕ್ಸಲೆನ್ಸ್' ಕಲ್ಪನೆಯನ್ನು ಜಾರಿಗೊಳಿಸಲುರಾಷ್ಟ್ರದಲ್ಲಿ 500 ಸ್ವಾಯತ್ತ ಕಾಲೇಜುಗಳನ್ನು (AUTONOMOUS COLLEGES) ಆರಂಭಿಸಲು ಸರಕಾರ ನಿರ್ಧರಿಸಿದ್ದು, ಈಗಾಗಲೇ ಈ ಬಗ್ಗೆ ಕೆಲಸಗಳು ಭರದಿಂದ ನಡೆದಿವೆ. ಇದಕ್ಕೆ 'ಯೋಗ್ಯವಾದ' ಕಾಲೇಜುಗಳನ್ನು ಗುರುತಿಸಲಾಗುತ್ತಿದೆ. ಈ "ಗೌರವಯುತ" ಸಂಸ್ಥೆಗಳು ತಮ್ಮದೇ ಆದ ಪದವಿಗಳನ್ನು ದಯಪಾಲಿಸಲು ಹಕ್ಕನ್ನು ಹೊಂದಿರುವುದು ಮಾತ್ರವಲ್ಲದೆ ತಮ್ಮ ಮೂಗಿನ ನೇರಕ್ಕನುಗುಣವಾಗಿ ನಡವಳಿಕಾ ನಿಯಮಾವಳಿಗಳನ್ನು ರೂಪಿಸಲು ಸ್ವತಂತ್ರವಿರುತ್ತವೆ ಸಹಜವಾಗೇ ಇವುಗಳು ಸಾಮಾನ್ಯ ಜನರಿಗೆ ನಿಲುಕದ ಗಗನ ಕುಸುಮಗಳಾಗಿರುತ್ತವೆ. ಒಂದೆಡೆ ಸರಕಾರ ಸಾಮಾನ್ಯ ಪಠ್ಯ ವಿಷಯದ ಬಗ್ಗೆ ಮಾತನಾಡಿದರೆ ಅದೇ ಸರಕಾರ ಸ್ವಾಯತ್ತ ಕಾಲೇಜುಗಳಲ್ಲಿ ತಮ್ಮದೇ ಆದ ಪಠ್ಯ ವಿಷಯ ಅಳವಡಿಸಲು ಅವಕಾಶ ಕಲ್ಪಿಸಿದೆ. ಇದು ಅಂಗೀಕೃತವಾದ ಪ್ರಜಾಸತ್ತಾತ್ಮಕ ಜಾತ್ಯಾತೀತ ಮೌಲ್ಯಕ್ಕೆವಿರುದ್ಧವಾದದಾಗಿದೆ.ಶಿಕ್ಷಣ ಕ್ಷೇತ್ರವನ್ನು ವ್ಯಾಪಾರಿ ಮಳಿಗೆಗಳನ್ನಾಗಿ ಪರಿವರ್ತಿಸಿರುವ ಖಾಸಗಿ ವ್ಯಕ್ತಿ-ಸಂಸ್ಥೆಗಳ ಪ್ರಾಬಲ್ಯವೇ ಅಧಿಕವಾಗಿರುವ ಭಾರತದ ಸ್ಥಿತಿಯಲ್ಲಿ "ಸ್ವಾಯತ್ತತೆ" ಇನ್ನಷ್ಟು ಅಪಾಯಕ್ಕೆ ದಾರಿ ಮಾಡಿಕೊಡಲಿದೆ. ಹೇರಳವಾದ ಲಾಭ ತರುವ ಅಂಗಡಿಗಳಾಗಿ ಇವು ರೂಪಾಂತರಗೊಳ್ಳಲಿವೆ. ಇವರ ಲಾಭಕೋರತನಕ್ಕೆ ಶಿಕ್ಷಕರು ವಿದ್ಯಾರ್ಥಿಗಳು ಸಮಾಜ ಬಲಿ ಬೀಳ ಬೇಕಾಗುತ್ತದೆ.

ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ದಾಳಿ

ಕೇಂದ್ರ ಸರಕಾರ ಇಷ್ಟೊಂದು ಆಸಕ್ತಿಯಿಂದ ಹೊಸ ಶಿಕ್ಷಣ ನೀತಿಯನ್ನು ದೇಶದ ಮೇಲೆ ಹೇರಲು ಮುಖ್ಯ ಕಾರಣ ಅದರ ಜನ ವಿರೋಧಿ ಆರ್ಥಿಕ ನೀತಿಯೇ ಆಗಿದೆ. ಅದರ 'ಹೊಸ ಆರ್ಥಿಕ ನೀತಿ' ಯನ್ನು ಪೋಷಿಸಲು ಶಿಕ್ಷಣ ಸಾಧನವಾಗಬೇಕಾಗಿದೆ. ಇನ್ನೊಂದೆಡೆ ಪ್ರಜ್ಞಾವಂತರಾದ ಶೈಕ್ಷಣಿಕ ಕ್ಷೇತ್ರದ ವಿದ್ಯಾರ್ಥಿಗಳು ಶಿಕ್ಷಕರು ಶಿಕೇತರ ನೌಕರರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ನೇರದಾಳಿ ನಡೆಸುವುದೂ ಸರಕಾರದ ಇನ್ನೊಂದು ಉದ್ದೇಶವಾಗಿದೆ. ಹೊಸ ಶಿಕ್ಷಣ ನೀತಿ ಕೇಂದ್ರ ಸರಕಾರಕ್ಕೆ ಹೇರಳ ಅಧಿಕಾರ ನೀಡಲಿದೆ. ಇದರ ಕೃಪಾಪೋಷಿತ ಯು.ಜಿ.ಸಿ. ಸರ್ವಾಧಿಕಾರಿ ಸಂಸ್ಥೆಯಾಗಲಿದೆ. ರಾಜ್ಯ ಸರಕಾರಗಳ ಮೇಲೆ ಸವಾರಿ ನಡೆಸಲಿದೆ. ಶಿಕ್ಷಣದ ವೆಚ್ಚ ರಾಜ್ಯಗಳ ಮೇಲೆ ಹೊರಿಸಲ್ಪಡಲಿದೆ. ವಿಶ್ವವಿದ್ಯಾನಿಲಯ, ಕಾಲೇಜು ಆಡಳಿತದಲ್ಲಿ ಚುನಾವಣೆ ರದ್ದಾಗಿ ನಾಮಕರಣ

(6ನೇ ಪುಟ ನೋಡಿ)

> ನೂತನ ಆರ್ಥಿಕ ನೀತಿಯ ಮರಿ ನೂತನ ಶಿಕ್ಷಣ ನೀತಿಯ ಪರಿಣಾಮಗಳು ಸ್ಪಷ್ಟವಾಗಿ ಗೋಚರಿಸಲಾರಂಭಿಸಿವೆ.
>
> * ಆಪರೇಷನ್ ಬ್ಲಾಕ್ ಬೋರ್ಡ್
> * ನವೋದಯ ಶಾಲೆ
> * ಸ್ವಾಯತ್ತ ಕಾಲೇಜುಗಳು
>
> ಎಲ್ಲಾ ಇವೆ ಆದರೆ ಪ್ರಾಥಮಿಕ ಶಿಕ್ಷಣ ನೀಡುವ ಹೊಣೆ ನಮ್ಮದಲ್ಲ ಎಂಬ ಈ ಹೊಣೆಗೇಡಿತನದ ಬಗ್ಗೆ ಬರೆಯುತ್ತಾರೆ, ರಾಜ್ಯ ಎಸ್. ಎಫ್. ಐ. ಅಧ್ಯಕ್ಷ.
>
> **ಆರ್. ಜಯಕುಮಾರ್**

ಎಲ್ಲರಿಗೂ ಶಿಕ್ಷಣ; ಎಲ್ಲರಿಗೂ ಉದ್ಯೋಗ

ಭಾರತದಲ್ಲಿ ನಿರುದ್ಯೋಗವೆಂಬ ಪೆಡಂಭೂತ ಯುವ ಜನರನ್ನು ಕಾಡುತ್ತಿದೆ. ಅವರ ಭವಿಷ್ಯ ಕತ್ತಲು ಗಟ್ಟುತ್ತಿರುವಾಗ ಪ್ರಜಾಸತ್ತಾತ್ಮಕ ಚಳುವಳಿಯೊಂದು ಅದನ್ನು ತಡೆಯುವ ಮಾರ್ಗ ಎಂಬುದನ್ನು ವಿವರಿಸುತ್ತಾರೆ ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಕಾಂ. ಶಿವರಾಂ.

ಬ್ರಿಟಿಷ್ ರಾಜ್ಯ ತೊಲಗಿದ ನಂತರದ ಕಳೆದ ನಾಲ್ಕುದಶಕಗಳ ಸ್ವತಂತ್ರ್ಯ ಭಾರತದಲ್ಲಿ ನಿರುದ್ಯೋಗ ಅಪಾಯಕಾರಿ ಮಟ್ಟದಲ್ಲಿ ಬೆಳೆಯುತ್ತಿದೆ. ಯಾವ ಸದುದ್ದೇಶ ಮತ್ತು ಅಭ್ಯುದಯದ ಭವ್ಯ ಭಾರತ ಕಟ್ಟುವ ಆಸೆ ಆಕ್ಷಾಂಕ್ಷೆಗಳಿಂದ ರಾಷ್ಟ್ರದ ವಿದ್ಯಾರ್ಥಿ ಯುವಜನರು, ರೈತ ಕಾರ್ಮಿಕರು ಮತ್ತು ಜನ ಸಾಮಾನ್ಯರು ಬ್ರಿಟಿಷ್ ದಬ್ಬಾಳಿಕೆಯ ವಿರುದ್ಧ ಧಾರ್ಡ್ಯತೆಯಿಂದ ಹೋರಾಡಿ ಅಪಾರ ತ್ಯಾಗ ಬಲಿದಾನ ಮಾಡಿದ್ದರೋ ಅದು ಈಗ ಭ್ರಮೆ ನಿರಶನವಾಗಿದೆ. ಎಲ್ಲರಿಗೂ ಸಂವಿಧಾನಾತ್ಮಕ ಅವಕಾಶಗಳು ನಿರಾಕರಿಸಲ್ಪಡುತ್ತಿವೆ. ವ್ಯಕ್ತಿಯ ಗೌರವ ಘನತೆಗಳು ಭಗ್ನವಾಗುತ್ತಿವೆ.

ಬ್ರಿಟಿಷ್‌ರ ವಿರುದ್ಧ ಜಾತಿ ಮತ ಪಂಥ ಮತ್ತು ಭಾಷೆಗಳ ಮತ ಭೇದವಿಲ್ಲದೆ ನಡೆದ ಅಂದಿನ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ನಮ್ಮ ಪರಂಪರೆ ಕಣ್ಮರೆಯಾಗುತ್ತಿದೆ. ಬ್ರಿಟಿಷ್ ವಿರೋಧಿ ಭಾರತೀಯರಿಗೆ ಅಂದು ಸಮಸ್ತ ಜನರ ಭಾವನೆಗಳು ಅರ್ಥವಾಗುತ್ತಿದ್ದವು. ಐಕ್ಯತೆಯ ಮಹಾಪೂರ ಎಲ್ಲೆಲ್ಲೂ ಅಲೆ ಎಬ್ಬಿಸಿದ್ದಿತು ಬ್ರಿಟಿಷ್‌ರನ್ನು ನಡುಗಿಸಿತ್ತು.

ಆದರೆ ಇಂದಿನಭಾರತದ ಚಿತ್ರಣವೇ ಬೇರೆಯಾಗುತ್ತಿದೆ. ಹಿಂದೂ ಮುಸ್ಲಿಂ ಮೂಲಭೂತವಾದಿಗಳೂ, ಎಡ ಕ್ರಿಶ್ಚಿಯನ್ ಸಂಘಟನೆಗಳೂ, ದಲಿತ ಖಾಲಿಸ್ತಾನವಾದಿಗಳೂ, ಜರ್ಖಂಡ್ ಉತ್ತರಕಂಡ್ ಗೋರ್ಖಾಲ್ಯಾಂಡ್ ವಾದಿಗಳೂ, ಶಿವಸೇನೆಗಳೂ, ಕೇಸರಿಗಳೂ, ಮೀಸಲಾತಿ ಪರ ಮತ್ತು ವಿರೋಧಿಗಳು ಹೀಗೆ ಎಲ್ಲೆಲ್ಲೂ ಜಾತಿ ಜಾತಿಗಳ ನಡುವೆ, ಭಾಷೆ ಭಾಷೆಗಳ ನಡುವೆ ಕಂದಕವೇರ್ಪಡುತ್ತಿದೆ. ರಾಷ್ಟ್ರ ವಿರೋಧಿ ಛಿದ್ರಕಾರಿ ಶಕ್ತಿಗಳು ತಮ್ಮ ಕರಾಳ ತಲೆಗಳನ್ನು ಎತ್ತುತ್ತಿವೆ.

ಈ ರಾಷ್ಟ್ರ ವಿರೋಧಿ ಶಕ್ತಿಗಳ ಹಿಂದೆ ಅಮೆರಿಕಾ ಬ್ರಿಟನ್ ಮತ್ತಿತರ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಕಾರ್ಯನಿರ್ವಹಿಸುತ್ತಿವೆ. ರಾಷ್ಟ್ರವನ್ನೊಡೆಯಲು ಹವಣಿಸುತ್ತಿವೆ. ಈ ಪ್ರಜಾಸತ್ತಾತ್ಮಕ ವಿರೋಧಿಗಳಿಗೆ ಇಂದು ಅಸ್ತ್ರವಾಗಿರುವುದು ನಿರುದ್ಯೋಗಿ ಯುವಜನರಾಗಿದ್ದಾರೆ.

ನಿರುದ್ಯೋಗದ ಪೀಡೆ

ಹೀಗಾಗಲು ಕಾರಣವೇನು ಸ್ವಾತಂತ್ರ್ಯ ಹೋರಾಟದಲ್ಲಿ ನೀಡಲಾಗಿದ್ದ ಭರವಸೆಗಳೆಲ್ಲವನ್ನೂ ಇಂದು ಕಾಂಗ್ರೆಸ್ ಸರ್ಕಾರಗಳು ಗಾಳಿಗೆ ತೂರಿವೆ. ಬ್ರಿಟಿಷರು ತುಳಿದ ದಬ್ಬಾಳಿಕೆಯ ಭೂಟ್ಸ್‌ಗಳಲ್ಲಿಯೇ ಕಾಂಗ್ರೆಸ್ ಸರಕಾರ ಆಡಳಿತ ನಡೆಸುತ್ತಿದೆ. ಅದರ ಆರ್ಥಿಕ ಸಾಮಾಜಿಕ ನೀತಿಗಳು ಭೂಮಾಲೀಕ ಬಂಡವಾಳಸ್ಥರ ಪರವಾಗಿದ್ದು, ರಾಜ್ಯಗಳ ಸ್ವಾಯತ್ತತೆ ಮತ್ತು ಅಭಿವೃದ್ಧಿಗಳನ್ನು ತುಳಿಯುವುದರತ್ತ ಆಡಳಿತ ನಡೆಸುತ್ತಿದೆ.

ಭಾರತದ ಯುವಜನರನ್ನು ಯಾವುದಾದರೂ ಪೀಡೆ ಪೀಡಿಸುತ್ತಿದೆ ಎಂದರೆ ಅದು ನಿರುದ್ಯೋಗದ ಪೀಡೆಯಾಗಿದೆ. ವಿಶ್ವದ ಶೋಷಣಾ ವ್ಯವಸ್ಥೆ ಇರುವ ಬಂಡವಾಳಶಾಹಿ ವ್ಯವಸ್ಥೆ ಇರುವ ರಾಷ್ಟ್ರಗಳ ಒಟ್ಟು ನಿರುದ್ಯೋಗಿ ಸಂಖ್ಯೆಯಲ್ಲಿ ಭಾರತವೊಂದರಲ್ಲೇ ಅರ್ಧಭಾಗ ನಿರುದ್ಯೋಗಿಗಳಿದ್ದಾರೆ. ಯಾವಾಗ ಎಲ್ಲಿ ಕೆಲವೇ ಜನರ ಕೈಯಲ್ಲಿ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳಲ್ಲಿ ಲಗಾಮಿದೆಯೋ ಮತ್ತು ಬಹು ಸಂಖ್ಯಾತ ದುಡಿಯುವವರ ಶ್ರಮಫಲವನ್ನು ದೋಚಿ ಕೆಲವೇ ಜನರು ಅನುಭವಿಸುವ ವ್ಯವಸ್ಥೆ ಇರುವುದೋ ಅಲ್ಲೆಲ್ಲ ನಿರುದ್ಯೋಗ ತಾಂಡವವಾಡುತ್ತದೆ.

ಬಂಡವಾಳಸ್ಥರ ಸಮಾಜದಲ್ಲಿ ಬೆಂಬಿಡಿದೆ ಬೆನ್ನಿಗಂಟಿಕೊಂಡು ಬರುವ ಸಂಪತ್ತು ಕೆಲವೇ ಮಂದಿಯ ಕೈಯಲ್ಲಿ ಕೇಂದ್ರಿಕರಣವಾದಂತೆಲ್ಲ ಅದರ ಜೊತೆಯಲ್ಲಿಯೇ ಎಂದೆಂದೂ ವಾಸಿಯಾಗದಂತೆ ಶಾಶ್ವತವಾಗುಳ ಯುವ ನಿರುದ್ಯೋಗವೆಂಬ ಕುಷ್ಠ ರೋಗವಾಗಿದೆ. ಬಂಡವಾಳಶಾಹಿ ಸಮಾಜ ಇರುವಲೆಲ್ಲ ನಿರುದ್ಯೋಗಿಗಳ ಸೇನೆಗೆ ಸ್ಕೂಲು ಕಾಲೇಜುಗಳಿಂದ ಭೂಮಿ ಕಾರ್ಖಾನೆಗಳಿಂದ ವಿದ್ಯಾರ್ಥಿ ಯುವಜನರು ರೈತ ಕಾರ್ಮಿಕರೂ, ಮತ್ತು ಮಧ್ಯಮದವರೂ ದಿನ ನಿತ್ಯವೂ ಲಕ್ಷ ಲಕ್ಷ ಸಂಖ್ಯೆಯಲ್ಲಿ ಸೇರುತ್ತಿರುತ್ತಾರೆ. ಈ ಪ್ರಕ್ರಿಯೆ ಇಲ್ಲದಿದ್ದಲ್ಲಿ ಬಂಡವಾಳಶಾಹಿ ಸಮಾಜ ಜೀವಂತ ವಿರಲು ಸಾಧ್ಯವಿರುವುದಿಲ್ಲ. ಆ ಅನಿಷ್ಟ ವ್ಯವಸ್ಥೆಯ ಒಂದು ಮುಖ್ಯ ಅಂಶವೇ ನಿರುದ್ಯೋಗ ಈ ಪರಿಸ್ಥಿತಿಗೆ ಭಾರತ ಹೊರತಲ್ಲ. ಕೈಗಾರಿಕಾಭಿವೃದ್ಧಿಯಲ್ಲಿ ಮುನ್ನಡೆ ಸಾಧಿಸಿರುವ ಅಮೆರಿಕಾ ಬ್ರಿಟನ್, ಫ್ರಾನ್ಸ್, ಇಟಲಿ, ಜಪಾನ್ ಮುಂತಾದ ರಾಷ್ಟ್ರಗಳಲ್ಲಿ ಕೂಡ ನಿರುದ್ಯೋಗದ. ಭೂತ ಅಲ್ಲಿನ ಜನರನ್ನು ಬೇಟೆಯಾಡುತ್ತಿದೆ.

ಬಂಡವಾಳಶಾಹಿ ಮೈನ ಕಜ್ಜಿಗಾಯಗಳು

ಎಲ್ಲಿ ಆರ್ಥಿಕತೆಯು ಪ್ರಜಾಸತ್ತಾತ್ಮಕ ಕೇಂದ್ರಿಕರಣಕ್ಕೆ ಒಳಪಟ್ಟಿದೆಯೋ ಶ್ರಮದ ಸಂಪತ್ತು ಸಮಾಜದ ಬಹು ಸಂಖ್ಯೆಯ ಜನರ ಕೈಯಲ್ಲಿದೆಯೋ, ಎಲ್ಲಿ ಖಾಸಗೀ ಮಾಲೀಕತ್ವ ಹಾಗೂ ಅವರ ಮೈಯಲ್ಲಿ ಕಜ್ಜಿ–ಗಾಯಗಳಂತಿರುವ ನಿರಕ್ಷರತೆ, ನಿರುದ್ಯೋಗ ಗರೀಭತನಗಳೂ, ಕೊಳೆಗೇರಿಗಳೂ, ವೇಶ್ಯಾವಾಟಿಕೆಗಳನ್ನು ನಿರ್ಮೂಲನ ಮಾಡಿ, ಸಮಾಜವನ್ನು ಸ್ವಚ್ಛ ಮಾಡಲಾಗಿದೆಯೋ ಅಂತಹ ಸಮಾಜವಾದಿ ರಾಷ್ಟ್ರಗಳಲ್ಲಿ ನಿರುದ್ಯೋಗವಿಲ್ಲ. ಅಲ್ಲಿ ಯಾರೊಬ್ಬರೂ ಕಡೆಗಣಿಸಲ್ಪಟ್ಟಿಲ್ಲ.

ಈ ಎಲ್ಲಾ ಚಾರಿತ್ರಿಕ ಅಂಶಗಳನ್ನು ಒಳಗೊಂಡು ಡಿ.ವೈ.ಎಫ್.ಐ. ಮತ್ತು ಎಸ್.ಎಫ್.ಐ. ಸಂಘಟನೆಗಳು ನೀಡಿದ ಘೋಷಣೆಯೇ 'ಎಲ್ಲರಿಗೂ ಶಿಕ್ಷಣ ಎಲ್ಲರಿಗೂ ಉದ್ಯೋಗ' 1981 ಸೆಪ್ಟೆಂಬರ್ ತಿಂಗಳಿನಲ್ಲಿ ಭಾರತದಾದ್ಯಂತ ಕೋಟಿ ಸಹಿ ಸಂಗ್ರಹ ಮಾಡಿ ಸೆಪ್ಟೆಂಬರ್ 15 ರಂದು ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಅರ್ಪಿಸಿ ಅಂದು ಬೋಟ್ ಕ್ಲಬ್ ಮೈದಾನದಲ್ಲಿ ಅರವತ್ತು ಸಾವಿರಕ್ಕೂ ಮೇಲ್ಪಟ್ಟು ಘೇರಾಯಿಸಿದ್ದ ವಿದ್ಯಾರ್ಥಿ ಯುವಜನರು ಒಕ್ಕೊರಳಿನಿಂದ ಕೂಗಿದ ಘೋಷಣೆ ಎಲ್ಲರಿಗೂ ಶಿಕ್ಷಣ ಎಲ್ಲರಿಗೂ ಉದ್ಯೋಗ.

ಈ ನಮ್ಮ ಘೋಷಣೆಯು ಭಾರತದ ಇಂದಿನ ವಿದ್ಯಾರ್ಥಿ ಯುವಜನರ ರೈತ ಕಾರ್ಮಿಕರ ಮತ್ತು ನೌಕರ ವರ್ಗದವರು ಮತ್ತು ಮುಖ್ಯವಾಗಿ ನಿರುದ್ಯೋಗಿಗಳ ಅಭದ್ರ ಬದುಕಿನ ನೇರ ಪ್ರಶ್ನೆಯಾಗಿದೆ. ಅವರನ್ನು ಒಂದು ಸಮಾನ ತತ್ವದ ವೇದಿಕೆಯತ್ತ ತರುವುದಾಗಿದೆ.

ಈ ಘೋಷಣೆಗೆ ಯುವ ಜನ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿರುವುದನ್ನು ತಡೆಗಟ್ಟಲು ಬೇರೆ ಅದರ ಸಂಘಟನೆಗಳು ಪ್ರಯತ್ನಿಸಿದವು. ಅದರಲ್ಲಿ ಜಾತೀಯ ಪಕ್ಷವಾದ ಬಿ.ಜೆ.ಪಿ ಒಂದು ಗೋವಾ ಮತ್ತು ಉತ್ತರ ಪ್ರದೇಶದ ಕೆಲವು ರಾಜ್ಯಗಳಲ್ಲಿ 'ಸಬ್ ಕೋ ಶಿಕ್ಷಣ್' 'ಸಬ್‌ಕೋ ಕಾಮ್' ಎಹೀ ಮೇ ಬಿ. ಜೆ. ಪಿ. ಕಾ ಕಾಮ್ ಎಂದು ಪ್ರಚಾರ ಮಾಡಿತ್ತು.

ಅರಿವು ಮೂಡಬೇಕಾಗಿದೆ.

ನಿರುದ್ಯೋಗ ಮತ್ತು ಅನಕ್ಷರತೆ ಎಂಬ ಅನಿಷ್ಟ ಅನಾಗರೀಕ ವ್ಯವಸ್ಥೆಯನ್ನು ಪ್ರತಿಪಾಧಿಸುವ ನಮ್ಮನ್ನಾಳುವ ವರ್ಗಗಳ ಅಪ್ರಮಾಣಿಕ ಹೇಳಿಕೆಗಳ ಬಗ್ಗೆ ವಿದ್ಯಾರ್ಥಿ ಯುವಜನರಲ್ಲಿ ಅರಿವು ಮೂಡಬೇಕಾಗಿದೆ. ಶ್ರೀಮುರಾರಿಜಿ ದೇಸಾಯಿ ಅವರು ಪ್ರಧಾನಿಯಾಗಿದ್ದಾಗ ಮುಂದಿನ ಹತ್ತು ವರ್ಷಗಳಲ್ಲಿ ನಿರುದ್ಯೋಗ ನಿವಾರಣೆ ಸಾಧ್ಯವಾಗುವುದೆಂದು ಹೇಳಿದರು. 1984 ರ ಚುನಾವಣಾ ಪ್ರಣಾಳಿಕೆಯಲ್ಲಿರಾಜ್ಯದ ಜನತಾ ಪಕ್ಷ ಮನೆಗೊಂದು ಉದ್ಯೋಗದ ಭರವಸೆ ನೀಡಿದ್ದಿತು. ಅಧಿಕಾರಕ್ಕೆ ಬಂದ ನಂತರ ಶ್ರೀ ಹೆಗಡೆ ಅವರು ಉದ್ಯೋಗವೆಂದರೆ ಸರ್ಕಾರಿಉದ್ಯೋಗವೆಂದು ಅರ್ಥವಲ್ಲ ಎಂದು ಸ್ಪಷ್ಟೀಕರಣ ನೀಡಿದ್ದರು. ಮೊನ್ನೆ ಅಧಿವೇಶನದ ಕೊನೆಯ ದಿನ ವಿರೋಧ ಪಕ್ಷದವರು ಈ ವಿಷಯದಲ್ಲಿ ಪಟ್ಟು ಹಿಡಿದಾಗ ಸರ್ಕಾರದಿಂದ ಉತ್ತರ ಬರಲಿಲ್ಲ. ಇತ್ತೀಚೆಗೆ ಸಂಸತ್ತಿನಲ್ಲಿ ನಿರುದ್ಯೋಗ ಭತ್ಯೆ ನೀಡಬೇಕೆಂದು ಸಿ.ಪಿ.ಐ.(ಎಂ) ನ ಸದಸ್ಯರು ಒತ್ತಾಯಿಸಿದಾಗ ಕೇಂದ್ರ ಸರ್ಕಾರ ಅದೊಂದು ಅನುತ್ಪಾದಿತ ವಿಷಯವೆಂದು ನಿರಾಕರಿಸಿತ್ತು.

ಇಂದು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲ ನಿರುದ್ಯೋಗಿ ಯುವ ಜನರಿಗೆ ಆಶಾಕಿರಣವಾಗಿಕಂಡಿರುವುದು ಸಿ.ಪಿ.ಐ.[ಎಂ] ನೇತೃತ್ವದ ಎಡರಂಗ ಮತ್ತು ಎಡ ಪ್ರಜಾಸತ್ತಾತ್ಮಕ ಸರ್ಕಾರಗಳಾಗಿವೆ. ತಮ್ಮ ಸೀಮಿತ ಅಧಿಕಾರದಲ್ಲಿ ಮತ್ತು ಕೇಂದ್ರ ಸರ್ಕಾರದ ಸರ್ವಾಧಿಕಾರಿ ಮಲತಾಯಿ ಧೋರಣೆ ಇದ್ದರೂ ಕೂಡ ಈ ಸರ್ಕಾರಗಳಿರುವ ಪಶ್ಚಿಮ ಬಂಗಾಳ, ತ್ರಿಪುರಾ ಮತ್ತು ಕೇರಳ ರಾಜ್ಯಗಳಲ್ಲಿ ನಿರುದ್ಯೋಗ ಭತ್ಯೆ ಸಿಗುತ್ತದೆ.

ಈ ರಾಜ್ಯಗಳಲ್ಲಿ ವಿದ್ಯಾರ್ಥಿ-ಯುವಜನರ ಒಗ್ಗಟ್ಟು ಮತ್ತು ಪ್ರಜಾಸತ್ತಾತ್ಮಕ ಹೋರಾಟವೇ ಕಾರಣವಾಗಿದೆ. ಕಳೆದ ವರ್ಷದಲ್ಲಿ ಕೇರಳ ರಾಜ್ಯದ ಡಿ.ವೈ.ಎಫ್.ಐ. ಘಟಕ ನಡೆಸಿದ ಚಾರಿತ್ರಿಕ ಹೋರಾಟದಿಂದಾಗಿ ಅಂದಿನ ಕರುಣಾಕರನ್ ನೇತೃತ್ವದ ಕಾಂಗ್ರೆ ಸರ್ಕಾರವನ್ನು ಶರಣಾಗಿಸಿದ್ದುದು ಮತ್ತು ಆ ಸರ್ಕಾರ ನಿರುದ್ಯೋಗ ಭತ್ಯೆ ನೀಡಲು ತನ್ನ ಪ್ರತಿಷ್ಟೆಯನ್ನು ಬಿಟ್ಟು ಕೊಟ್ಟಿತು. ಏಕೆಂದರೆ ಹಿಂದಿನ ಸಿ.ಪಿ.ಐ. (ಎಂ) ನೇತೃತ್ವದ ನಾಯನಾರ್ ಸರ್ಕಾರ ಜಾರಿ ಮಾಡಿದ್ದ ನಿರುದ್ಯೋಗ ಭತ್ಯೆಯ ನಿರ್ಣಯವನ್ನು ಕಾಂಗ್ರೆ ಸರ್ಕಾರ ರದ್ದು ಮಾಡಿದ್ದಿತು.

ನಿರುದ್ಯೋಗದ ಗಣತಿ

ಕೇಂದ್ರ ಸರ್ಕಾರವು ಜನಗಣತಿ, ಉದ್ಯೋಗ ವಿನಿಮಯ ಕೇಂದ್ರಗಳು ಮತ್ತು ಎನ್.ಎಸ್.ಎಸ್. ಇಲಾಖೆಗಳ ನೊಂದಣಿಯ ಆಧಾರಗಳಲ್ಲಿ ನಿರುದ್ಯೋಗ ಸಂಖ್ಯೆಯನ್ನು ಅಂದಾಜು ಮಾಡಿದ್ದರೂ. ಅದು 3.5 ಕೋಟಿಯನ್ನು ಮೀರಿದೆ. ಇದು ಗ್ರಾಮೀಣ ಭಾರತದ ಕಡೆ ನೋಡುವ ಪ್ರಯತ್ನ ಮಾಡಿರುವುದಿಲ್ಲ.

ನಮ್ಮ ರಾಷ್ಟ್ರೀಯರೆಲ್ಲರೂ ನಿರುದ್ಯೋಗದ ಗಣತಿಗೆ ಒಳಪಟ್ಟಿಲ್ಲ. ಎಲ್ಲಾ ಅಕ್ಷರಸ್ಥ ನಿರುದ್ಯೋಗಿಗಳು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ತಮ್ಮ ಹೆಸರನ್ನು ನೊಂದಾಯಿಸಿರುವುದಿಲ್ಲ. ಅಕ್ಷರತೆಯು ಕೇವಲ ಶೇಖಡ ಮುವತ್ತಿದೆ. ಜಿಲ್ಲೆಗೊಂದು ಉದ್ಯೋಗ ವಿನಿಮಯ ಕೇಂದ್ರಗಳಿವೆ. ಇವು ಲಂಚ ರುಸುವತ್ತು ಮತ್ತು ಸ್ವಜನ ಪಕ್ಷಪಾತಗಳಲ್ಲಿ ಮುಳುಗಿವೆ. ನೊಂದಾಯಿಸಿದವರಿಗೆ ಉದ್ಯೋಗ ಸಿಗುವುದಿಲ್ಲ. ಕೇವಲ ಸಂದರ್ಶನದ ಕಾರ್ಡ್ ಪಡೆಯಲು ಲಂಚ ನೀಡಬೇಕಿವೆ. ಒಂದು ಉದ್ಯೋಗ ಪಡೆಯುವುದೆಂದರೆ ಸಾಮಾನ್ಯವಾದ ಕೆಲಸವಲ್ಲ. ಐದರಿಂದ ಇಪ್ಪತ್ತೈದು ಸಾವಿರದವರೆಗೂ ಬೆಲೆ ತೆರಬೇಕಾಗಿದೆ.

ಇದರಿಂದಾಗಿ ಬೇಸತ್ತ ನಿರುದ್ಯೋಗಿ ಯುವ ಜನರು ತಮ್ಮ ಹೆಸರನ್ನು ನೊಂದಾಯಿಸುವ ತೊಂದರೆಯನ್ನೇ ತೆಗೆದು ಕೊಳ್ಳುವುದಿಲ್ಲ. ಮತ್ತೊಂದು ವಿಷಯವೆಂದರೆ ವಿನಿಮಯ ಕೇಂದ್ರಗಳು ದೂರ ದೂರದಲ್ಲಿರುವುದು. ತಾಲ್ಲೂಕಿಗೊಂದಾದರೂ ಉದ್ಯೋಗ ವಿನಿಮಯ ಕೇಂದ್ರಗಳನ್ನು ಸ್ಥಾಪಿಸಿದರೆ ನಿರುದ್ಯೋಗಿಗಳನ್ನು ಎಣಿಸಲು ಸಾಧ್ಯವಾಗಬಹುದು. ಇಲ್ಲಿ ಕೂಡ ಮೊದಲೇ ತಿಳಿದಿರುವಂತೆ, ನಿರುದ್ಯೋಗಿ ಯುವ ಜನರಿಗೆ ಬೇಸರ, ಜಿಗುಪ್ಸೆಗಳು ತುಂಬಿರುವುದರಿಂದ ತಮ್ಮ ಹೆಸರನ್ನು ಉತ್ಸಾಹ ಪೂರಿತವಾಗಿ ನೊಂದಾಯಿಸುವುದು ಕಷ್ಟವಿರುತ್ತದೆ.

ಈ ದೃಷ್ಟಿಯಲ್ಲಿ ನೋಡಿದರೆ ನಿರುದ್ಯೋಗ ರಾಷ್ಟ್ರದಲ್ಲಿ ಸುಮಾರು ಹದಿನೈದು ಕೋಟಿಯನ್ನು ಮೀರುತ್ತದೆ. ಮಳೆ ಬೆಳೆಯಾದರೆ ಗ್ರಾಮೀಣಭಾರತೀಯರಿಗೆ ವರ್ಷದಲ್ಲಿ ಕೇವಲ120-125 ದಿನಗಳು ಉದ್ಯೋಗ ಸಿಗುತ್ತದೆ. ಅದಕ್ಕೂ ಕನಿಷ್ಟ ಕೂಲಿಯ ನಿಯಮವೇನೂ ಇರುವುದಿಲ್ಲ. ಮಳೆ ಬೆಳೆಯಾಗದಿದ್ದರೆ, ಆ ಇಡೀ ಪ್ರದೇಶ, ರಾಜ್ಯಗಳು ಅಧಿಕ ನಿರುದ್ಯೋಗದಿಂದ ಮುಳುಗುತ್ತವೆ. ಬರಗಾಲಗಳೂ ಮತ್ತು ಪ್ರವಾಹಗಳು ಬಂದಾಗಲಂತೂ ಹೆಚ್ಚು ಕಮ್ಮಿ ಎಲ್ಲಾ ಜನರೂ ಸ್ಥಳಾಂತರವಾಗುವುದರ ಕಾರಣ ನಿರುದ್ಯೋಗ ಅಗಣಿತವಾಗುತ್ತದೆ. ಮತ್ತುಭೂಸುಧಾರಣೆ ಕೂಡ ಪ್ರಾಮಾಣಿಕವಾಗಿರದೆ, ಶೇಕಡ 75%ರಷ್ಟು ಭೂಮಿ ಕೇವಲ ಶೇಕಡ ಐದರಷ್ಟು ಭೂಮಾಲೀಕರ ಕೇಂದ್ರೀಕರಣವಾಗಿದೆ.

ಸಂವಿಧಾನದಲ್ಲಿ ಉದ್ಯೋಗದ ಹಕ್ಕು ಮೂಲಭೂತ ಹಕ್ಕನ್ನಾಗಿ ಸೇರಿಸದಿರುವ ಕಾರಣ, ಖಾಸಗಿಯವರು ನಡೆಸುವ ಉದ್ಯಮಗಳು ಯಾವಾಗ ಬೇಕಾದರೂ ಮುಚ್ಚಿಕೊಳ್ಳಬಹುದು. ಉದ್ಯೋಗಿ ಕಾರ್ಮಿಕರನ್ನು ಕಿತ್ತು ಹಾಕಬಹುದು. ಸರ್ಕಾರಿ ಉದ್ಯಮಗಳಲ್ಲೂ ಖಾಸಗಿಯವರ ಮತ್ತು ವಿದೇಶಿ ಬಂಡವಾಳಗಾರರ ಹಿಡಿತವಿರುವುವರಿಂದ ನೌಕರರು ಕೂಡ ತಮ್ಮ ಉದ್ಯೋಗದಲ್ಲಿ, ಭದ್ರತೆಯನ್ನು ಪಡೆದಿರುವುದಿಲ್ಲ. ಆದುದರಿಂದಾಗಿಯೇ ಎಸ್ಮಾಗಳಂತ ಕರಾಳ ಶಾಸನಗಳು ಕಾರ್ಯ ನಿರ್ವಹಿಸುತ್ತವೆ. ನಮ್ಮ ದೇಶದಲ್ಲಿ ಸ್ವಚ್ಛ (?) ಯುವ ಪ್ರಧಾನಿ ಅಧಿಕಾರಕ್ಕೆ ಬಂದ ಮೇಲಂತೂ ಯುವ ಜನರಿಗೆ ಉದ್ಯೋಗವೆಂಬುದು ಕನ್ನಡಿಯೊಳಗಿನ ಗಂಟಾಗಿದೆ. ರಾಜೀವರ ಕೇವಲ ಸುಮಾರು ನಾಲ್ಕು ವರ್ಷಗಳ ಆಡಳಿತದ ಅವಧಿಯಲ್ಲಿ ಇಪ್ಪತ್ತೆಂಟು ಲಕ್ಷಕ್ಕೂ ಮಿಗಿಲಾಗಿ ನಿರುದ್ಯೋಗ ಹೆಚ್ಚಾಗಿದೆ. ಸ್ವದೇಶಿ-ವಿದೇಶಿ ಬಂಡವಾಳಸ್ಥರಿಗೆ ಅತ್ಯಧಿಕ ರಿಯಾಯಿತಿ ನೀಡಲಾಗಿದೆ. ವಿದೇಶಿ ತಂತ್ರ ಜ್ಞಾನ ಗಣಕಯಂತ್ರಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಈ ಯಂತ್ರಗಳು ಮಾಲೀಕರನ್ನು ದೊಡ್ಡ ಮಾಲೀಕರನ್ನಾಗಿಸುತ್ತವೆ. ಹಂತ ಹಂತವಾಗಿ ಎಲ್ಲಾ ಕಾರ್ಮಿಕ-ನೌಕರರು ಕೆಲಸ ಕಳೆದುಕೊಳ್ಳುತ್ತಾರೆ ಈಗಾಗಲೇ ಲಕ್ಷಕ್ಕೂ ಮೇಲ್ಪಟ್ಟು ಕಾರ್ಖಾನೆಗಳು

[6ನೇ ಪುಟ ನೋಡಿ]

ರೈತರಿಂದ ಉತ್ಸಾಹದ ಪಿಕೆಟಿಂಗ್

[3ನೇ ಪುಟದಿಂದ]

ಆರ್. ವೆಂಕಟರಾಮಯ್ಯ, ಗೋಪಾಲ್ ನಾಗಿರೆಡ್ಡಿ, ನಾಗಮೋಹನದಾಸ್, ಕೃಷ್ಣಯ್ಯ, ನವರುಗಳು ನಾಯಕತ್ವ ವಹಿಸಿದ್ದರು. 150 ಗ್ರಾಮ ಪ್ರಚಾರ ಕಾರ್ಯ ನಡೆಸಿ 10 ಬಹಿರಂಗ ಸಭೆಯನ್ನು ನಡೆಸಲಾಗಿತ್ತು. ಆವಣಿ, ದೇವ ಸಾಯ ಸಮುದ್ರ, ನಂಗಲಿ ಪಲ ಮುಘಟ್ಟ, ದುಗ್ಗಸಂದ್ರ, ತಾಯಲೂರು, ಎಮ್ಮನತ್ತ, ಮಲನಾಯಕನ ಹಳ್ಳಿ ರೈತರು ಪಿಕೆಟಿಂಗ್‌ನಲ್ಲಿ ಭಾಗವಹಿಸಿದ್ದರು.

ಬಾಗೇಪಲ್ಲಿ

ಮಂಡಲ ಪಂಚಾಯತಿ ವಾರಾಗಿ ಪ್ರತಿದಿನವೂ ಬಾಗೇಪಲ್ಲಿಗೆ ಘೇರಾಯಿಸಿ ಬಂಧನಕ್ಕೊಳಗಾದವರಲ್ಲಿ ತಿಮ್ಮಂಪಲ್ಲಿ, ಗೂಳೂರು, ಚಾಕ ವೇಲ, ಚೇಳೂರು ಪಾತಪಾಳ್ಯ ಬಿಳ್ಳೂರು ಮಂಡಲಗಳ ರೈತರು ಸೇರಿದ್ದಾರೆ. ಪ್ರತಿದಿನವೂ ಉತ್ಸಾಹದಿಂದ ಭಾಗವಹಿಸಿದ ರೈತರ ಸಂಖ್ಯೆ ಕೊನೆಯ ದಿನವಾದ ದಿನಾಂಕ 11ರಂದು ಗರಿಷ್ಟ ಮಟ್ಟವನ್ನು ಮುಟ್ಟಿತು. ಅಂದು ಬೃಹತ್ ಬಹಿರಂಗ ಸಭೆಯೂ ನಡೆಯಿತು. ಕಾಂ. ಶ್ರೀರಾಮರೆಡ್ಡಿ, ಕಾಂರಾಮಕೃಷ್ಣಪ್ಪ, ಕಾಂ. ಗಂಗಲಪ್ಪ ರೈತರನ್ನುದ್ದೇಶಿಸಿ ಮಾತನಾಡಿದರು ದಿನಾಂಕ 10 ರಂದು ನಡೆದ ಪಿಕೆಟಿಂಗ್‌ನ ನೇತೃತ್ವವನ್ನು ಪಾತಪಾಳ್ಯ, ಬಿಳ್ಳೂರು ಮಂಡಲಗಳ ಉಪ ಪ್ರಧಾನರಾದ ಕಾಂ ಗಂಗಲಪ್ಪ ಹಾಗೂ ಗಂಗಿರೆಡ್ಡಿ ವಹಿಸಿದ್ದರು.

ಬಂಗಾರ ಪೇಟೆ

ಸೆಪ್ಟೆಂಬರ್ 11ರಂದು ತಾಲ್ಲೋಕು ಕಛೇರಿಯ ಮುಂದೆ ಬಿ.ಇ.ಎಂ.ಎಲ್. ಬಿ.ಎ.ಎಲ್. ನ 100 ಮಂದಿ ಕಾರ್ಮಿಕರು, ರೈತರು ಧರಣಿ ಸತ್ಯಾಗ್ರಹ ನಡೆಸಿ ತಹಸೀಲ್ದಾರ್‌ರಿಗೆ ಮನವಿ ಅರ್ಪಿಸಿದರು, ಕಾ॥ ಶ್ರೀನಿವಾಸ್, ಜಯರಾಂ, ಸನರಿದಾಸ್, ಅರ್ಜುನನ್ ನೇತೃತ್ವ ವಹಿಸಿದ್ದರು,

ಗೌರಿಬಿದನೂರು

ಸೆಪ್ಟೆಂಬರ್ 8 ರಂದು ತಾಲ್ಲೋಕಿನ ಮಂಚೇನಹಳ್ಳಿ ರಸ್ತೆತಡೆ ಚಳುವಳಿ ನಡೆಸಿ 91 ರೈತರು ಬಂಧಿತರಾದರು. ಗೌರಿಬಿದನೂರು ಟೌನ್‌ನಲ್ಲಿ ನೂರಾರು ರೈತರು ರಸ್ತೆ ತಡೆ ಚಳುವಳಿ ನಡೆಸಿ 35 ಮಂದಿ ರೈತರು ಕಾ. ಜಯರಾಮರೆಡ್ಡಿಯವರ ನೇತೃತ್ವದಲ್ಲಿ ಬಂಧನಕ್ಕೊಳಗಾದರು.

ಚಿಕ್ಕಬಳ್ಳಾಪುರ

100 ರೈತರು ಜಿಲ್ಲಾ ರೈತರ ಸಂಘದ ಉಪಾಧ್ಯಕ್ಷ ಕಾ. ಎನ್. ಲಕ್ಷ್ಮಯ್ಯನವರ ನೇತೃತ್ವದಲ್ಲಿ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು, ಸೆಪ್ಟೆಂಬರ್ 7ರಿಂದ 11ವರೆವಿಗೆ 800 ರೈತರು ಬಂಧನಕ್ಕೊಳಗಾಗಿದ್ದಾರೆ.

ಶಿಡ್ಲಘಟ್ಟ

ಸೆಪ್ಟೆಂಬರ್ 7ರಂದು ಒಂದು ಸಹಸ್ರ ರೈತರು ಟೌನಿನಲ್ಲಿ ಮೆರವಣಿಗೆ ನಡೆಸಿ 51 ಸ್ವಯಂ ಸೇವಕರನ್ನೊಳಗೊಂಡು ಶಿಸ್ತುಬದ್ಧವಾಗಿ ತಾಲೋಕು ಕಛೇರಿ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು. ಕಾಂ. ಕೆ.ಎಂ. ವೆಂಕಟೇಶ್ ಕಾಂ. ಆಂಜನೆಯರೆಡ್ಡಿ, ಅಬ್ದುಲ್ ಸುಭಾನ್, ಮುನಿಯಪ್ಪ ನೇತೃತ್ವ ವಹಿಸಿದರು.

ಚಿಂತಾಮಣಿ

ಈತಾಲ್ಲೋಕಿನ ಎನಮಲ ಪಾಡಿ, ಇರಿಗಂಪಲ್ಲಿ ಮುರುಗ ಮಲ್ಲ, ಕಸಬ, ಚಿಲಕಲನೆರ್ಪುಗಳಲ್ಲಿ 7ರಿಂದ 11 ರವರೆವಿಗೆ ನಡೆದ ರೈತರ ಪಿಕೆಟಿಂಗ್‌ನಲ್ಲಿ ಸುಮಾರು 600 ಮಂದಿ ಬಂಧನವಾಗಿದ್ದಾರೆ. ಸೆಪ್ಟೆಂಬರ್ 7 ರಂದು ತಾಲ್ಲೋಕು ಕಛೇರಿ ಪಿಕೆಟಿಂಗ್ ನಡೆಸಿ 100 ರೈತರನ್ನು ಬಂಧಿಸಲಾಯಿತು.

ಗುಲ್ಬರ್ಗಾ ಜಿಲ್ಲೆ

ಜಿಲ್ಲೆಯಾದ್ಯಂತ ಸುಮಾರು 4 ಸಾವಿರ ರೈತರು ಪಿಕೆಟಿಂಗ್‌ನಲ್ಲಿ ಭಾಗವಹಿಸಿ ಬಂಧನಕ್ಕೊಳಗಾಗಿದ್ದಾರೆ.

ಷಹಾಪುರ

ಸೆಪ್ಟೆಂಬರ್ 7ರಂದು 1000ಮಂದಿ 8,9 ರಂದು 400ಮಂದಿ. ಕಾ॥ಚನ್ನಪ್ಪ ಆನೆಗುಂದಿ, ಕೇಶವರಾಜ ರಾಜರ, ತಿಮ್ಮಪ್ಪ ನಾಯ್ಕ ಜಹಾಂಗೀರದಾರ ಮುಂದಾಳತ್ವವಹಿಸಿದರು.

ಜೇವರ್ಗಿ

ಸೆಪ್ಟೆಂಬರ್ 7ರಿಂದ 10 ರವರೆವಿಗೆ 1 ಸಾವಿರ ರೈತರು ಪಿಕೆಟಿಂಗ್‌ನಲ್ಲಿ ಬಂಧನಕ್ಕೊಳಗಾದರು.

ಶಹಾಬಾದ್

ಸೆಪ್ಟೆಂಬರ್ 11ರಂದು ಎ.ಬಿ.ಎಲ್‌ನ 1,000 ಕಾರ್ಮಿಕರು ಎಂ.ಎಸ್.ಕೆ, ಮಿಲ್ ನ 200 ಕಾರ್ಮಿಕರು ಸ್ಟೇಶನ್ ಬಜಾರಿನಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಛೇರಿ ಮುಂದೆ ಧರಣಿಸತ್ಯಾಗ್ರಹನಡೆಸಿ ಮನವಿ ಅರ್ಪಿಸಲಾಯಿತು. 1200 ರೈತ-ಕಾರ್ಮಿಕರನ್ನು ಬಂಧಿಸಲಾಯಿತು. ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾ॥ ಕಲ್ಲಪ್ಪ ಕಿರಣಗಿ, ಸಿ.ಎ. ಪಾಟೀಲ್, ಎ.ಬಿ. ದಾಸ್, ಅರುಣ ಕುಮಾರ್, ಮನೋಹರ ಮಾತನಾಡಿದರು.

ಬಳ್ಳಾರಿ ಜಿಲ್ಲೆ

ಹೊಸಪೇಟೆ

ಸೆಪ್ಟೆಂಬರ್ 7ರಂದು ತಾಲ್ಲೋಕು ಹಾಗೂ ಅಂಚೆ ಕಛೇರಿಯನ್ನು ಸುಮಾರು 500 ರೈತರು ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು. ಪಿಕೆಟಿಂಗ್ ನೇತೃತ್ವವನ್ನು ಕಾ. ವೆಂಕಟೇಶ್, ಭರ್ಮಪ್ಪ, ಪಾಪಣ್ಣ, ಜಂಬಯ್ಯ ನಾಯ್ಕ ಗುರುಶಾಂತ್ ಮಂಜುನಾಥ್ ವಹಿಸಿದ್ದರು. ರೈತ ಕೃಷಿ ಕೂಲಿಗಾರರು ಮಹಿಳೆ ವಿದ್ಯಾರ್ಥಿ-ಯುವಜನರು ಈ ಪ್ರದರ್ಶನ ಪಿಕೆಟಿಂಗ್‌ನಲ್ಲಿ ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಹಗರಿಬೊಮ್ಮನಹಳ್ಳಿ

ತಾಲ್ಲೋಕು ಕಛೇರಿ ಪಿಕೆಟಿಂಗ್ ನಡೆಸಿದ ಸಾವಿರಾರು ರೈತರು ಕಛೇರಿಯ ಕೆಲಸ ಕಾರ್ಯ ಸ್ತಬ್ಧವಾಗುವಂತೆ ಮಾಡಿ ಬಂಧನಕ್ಕೊಳಗಾದರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಹರಪ್ಪನಹಳ್ಳಿ

ಸಾವಿರಾರು ರೈತರು ತಾಲೋಕು ಕಛೇರಿಯನ್ನು ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು ರೈತ ಮುಖಂಡ ಕಾ. ಬಿ. ಪರಶುರಾಂ ನೇತೃತ್ವದಲ್ಲಿ ವಹಿಸಿದ್ದರು. ಸೆಪ್ಟೆಂಬರ್ 7ರಿಂದ 11 ರವರೆವಿಗೂ ಸುಮಾರು 600 ಮಂದಿ ರೈತರು ಪಿಕೆಟಿಂಗ್‌ನಲ್ಲಿ ಬಂಧಿತರಾಗಿದ್ದರು.

ರಾಯಚೂರು

ರಾಯಚೂರು ಜಿಲ್ಲೆಯಾದ್ಯಂತ 2 ಸಾವಿರದ ಐನೂರು ರೈತರು ಪಿಕೆಟಿಂಗ್‌ನಲ್ಲಿ ಬಂಧನಕ್ಕೊಳಗಾದರು. ಸೆಪ್ಟೆಂಬರ್ 7 ರಿಂದ 9ರವರೆಗೆ ರಾಯಚೂರಿನಲ್ಲಿ ಕ್ರಮವಾಗಿ 200, 500, 1300 ರೈತರು ಪಿಕೆಟಿಂಗ್‌ನಲ್ಲಿ ಬಂಧಕ್ಕೊಳಗಾದರು.

ಲಿಂಗಸುಗೂರು

ಸೆಪ್ಟೆಂಬರ್ 8ರಂದು ತಾಲ್ಲೋಕು ಕಛೇರಿಯನ್ನು 400ರೈತರು ಪಿಕೆಟಿಂಗ್ ನಡೆಸಿದರು. ಕಾಂ. ಶರಣಪ್ಪನಾಗಲಾಪುರ ಎನ್. ಬಿ. ಠಾಕೂರ್, ಮಲ್ಲಯ್ಯ ರೈತರನ್ನುದ್ದೇಶಿಸಿ ಮಾತನಾಡಿದರು.

ಬಿಜಾಪುರ ಜಿಲ್ಲೆ

ಸೆಪ್ಟೆಂಬರ್ 7 ಮತ್ತು 8 ರಂದು ಬಿಜಾಪುರದಲ್ಲಿ ರೈತರು ಜಿಲ್ಲಾಧಿಕಾರಿ ಮತ್ತು ತಾಲ್ಲೋಕು ಕಛೇರಿಗಳನ್ನು ಪಿಕೆಟಿಂಗ್ ನಡೆಸಿದರು. ಮೊದಲನೆಯ ದಿನ 600 ಮಂದಿ ಎರಡನೆಯ ದಿನ 100 ಮಂದಿ ಬಂಧನಕ್ಕೊಳಗಾದರು. ಕಾ॥ ಎನ್.ಕೆ. ಉಪಾಧ್ಯಾಯ ಬೀಮಶಿಕಲಾದಗಿ ಹೊನ್ನುಟ್ಟಗಿ, ಸದಾನಂದ ಮೋದಿ, ಲಕ್ಷ್ಮಣ ಸಲೂಟಗಿ, ಮಳಸಿದ್ದ ನಾಯಕೋಡಿ ಹಂದ್ರಾಳದ್ಯಾಮನಗೌಡ ಬಿರಾದಾರ ಹನುಮಂತ ಸಂದಿಮನಿ, ರೈತರನ್ನುದ್ದೇಶಿಸಿ ಮಾತನಾಡಿದರು. 38 ಮಂದಿ ಮಹಿಳೆಯರು ಪಿಕೆಟಿಂಗ್‌ನಲ್ಲಿ ಭಾಗವಹಿಸಿದ್ದರು 9 ಮತ್ತು 10 ರಂದು ಬಿ.ಡಿ.ಓ. ಮತ್ತು ಜಿಲ್ಲಾ ಪರಿಷತ್ ಕಛೇರಿ ಪಿಕೆಟಿಂಗ್‌ನಲ್ಲಿ 100 ಮತ್ತು 150 ರೈತರುಪಿಕೆಟಿಂಗ್ ಮಾಡಿದರು.

ಸೆಪ್ಟೆಂಬರ್ 11 ರಂದು ಎರಡು ಸಹಸ್ರ ರೈತರು ಜಿಲ್ಲಾಧಿಕಾರಿಯವರ ಕಾರನ್ನು ಮುತ್ತಿಗೆ ಹಾಕಿ ಘೇರಾವೋ ಮಾಡಿದರು. ಜಿಲ್ಲೆಯಾದಂತ 5550 ರೈತರಲ್ಲಿ 1080 ಮಹಿಳೆಯರು ಪಿಕೆಟಿಂಗ್‌ನಲ್ಲಿ ಬಂಧನಕ್ಕೊಳಗಾಗಿದ್ದಾರೆ. 38 ಮಂದಿ ರೈತರ ಮೇಲೆ ಕೇಸು ಹಾಕಲಾಗಿದೆ.

ಬ. ಬಾಗೇವಾಡಿ

ಬಸವನ ಬಾಗೇವಾಡಿ 7 ರಂದು 2,000 ರೈತರ ಬೃಹತ್ ರ್‍ಯಾಲಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು. ತಾಲ್ಲೋಕು ಕಛೇರಿಯನ್ನು ಪಿಕೆಟಿಂಗ್ ಮಾಡಿ ತಹಸೀಲ್ದಾರ್‌ರಿಗೆ ಮನವಿ ಅರ್ಪಿಸಲಾಯಿತು. 671 ಮಂದಿ ಬಂಧನಕ್ಕೊಳಗಾದರು. ಕಾ।ಭೀಮಶೀಕಲಾದಗಿ, ಕಾ।ಮನ್ನೂಸಾಬಕಲಾದಗಿ, ಸಾಯಿಬಣ್ಣಾಹಂದಿಗನೂರ, ಬಸವಂತಪ್ಪಾ ಕಲ್ಲೊಳ್ಳಿ, ರಾಮಚಂದ್ರರೂಡಗಿ, ಮಡವಾಳಪ್ಪ, ರಾಮಲಮಾಣಿಯವರುಗಳು ಮುಂದಾಳತ್ವ ವಹಿಸಿದ್ದರು.

ಇಂಡಿತಾಲ್ಲೋಕು

ತಾಲ್ಲೋಕಿನಲ್ಲಿ ಸೆಪ್ಟೆಂಬರ್ 8 ರಂದು ಸುಮಾರು 500 ರೈತರು ಮೆರವಣಿಗೆ ನಡೆಸಿ ಉಪ ವಿಭಾಗಾಧಿಕಾರಿ ಹಾಗೂ ತಹಸೀಲ್ದಾರ್‌ರವರಿಗೆ ಮನವಿ ಅರ್ಪಿಸಿ ಪಿಕೆಟಿಂಗ್ ಮಾಡಿದ 250 ರೈತರನ್ನು ಬಂಧಿಸಲಾಯಿತು. ಕಾ॥ ಎನ್.ಕೆ.ಉಪಾಧ್ಯಯರು, ಭೀಮಶಿಕಲಾದಗಿ ರೈತರನ್ನುದ್ದೇಶಿಸಿ ಮಾತನಾಡಿದರು. ಕಾ॥ಪಾಟೀಲ, ಶ್ರೀಶೈಲ ಗೊಬ್ಬರ್, ಗುರಪ್ಪ, ಬಸಪ್ಪಪರಡಿಯವರು ಮೆರವಣಿಗೆ ನೇತೃತ್ವ ವಹಿಸಿದ್ದರು.

ಸಿಂದಗಿ

ಸೆಪ್ಟೆಂಬರ್ 9 ರಂದು ತಹಸೀಲ್ದಾರ್ ಕಛೇರಿಯನ್ನು 200 ರೈತರು ಪಿಕೆಟಿಂಗ್ ನಡೆಸಿ 120 ಮಂದಿರೈತರು ಬಂಧನಕ್ಕೊಳಗಾದರು.

ಬೆಂಗಳೂರು

ಅಖಿಲ ಭಾರತ ಕಿಸಾನ್ ಸಭಾ ಸೆಪ್ಟೆಂಬರ್ 7ರಿಂದ13ರ ವರೆವಿಗೆ ರಾಷ್ಟ್ರ ಮಟ್ಟದ ರೈತರ ಪಿಕೆಟಿಂಗ್ ನಡೆಸಲು ನೀಡಿದ ಕರೆಯಂತೆ ಜಿಲ್ಲೆಯ ಕೆಂಗೇರಿ, ತಾವರೆಕೆರೆ, ಉತ್ತರಹಳ್ಳಿ, ಬೇಗೂರು, ಬಿದರಹಳ್ಳಿ ಕೃಷ್ಣರಾಜಪುರ ಹೊಡಿ, ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೋಕುಹೊಸಕೋಟೆತಾಲ್ಲೋಕು, ಮಾಗಡಿತಾಲೋಕುಗಳಲ್ಲಿತಾಲ್ಲೋಕು ಕಛೇರಿ, ಜಿಲ್ಲಾಕಛೇರಿಗಳನ್ನು ಪಿಕೆಟಿಂಗ್ ನಡೆಸಿ ಸುಮಾರು 1 ಸಾವಿರ ರೈತರು ಬಂಧನಕ್ಕೊಳಗಾದರು. ಸೆಪ್ಟೆಂಬರ್ 11 ರಂದು ಬೆಂಗಳೂರಿನಲ್ಲಿ ಸಿ.ಐ.ಟಿ.ಯು. ನೇತೃತ್ವದಲ್ಲಿ ಒಂದು ಸಹಸ್ರಮಂದಿ ಕಾರ್ಮಿಕರು ರಾಜಭವನ ಪಿಕೆಟಿಂಗ್ ನಡೆಸಿ ಬಂಧಿತರಾದರು. ಕಾ॥ಜಗನ್ನಾಥ್‌ಲಕ್ಕಣ್ಣ ವೆಂಕಟಾಚಲಯ್ಯ ಶಾಮಣ್ಣರೆಡ್ಡಿ, ರಾಮಭದ್ರಯ್ಯ, ಮುಗವಾಳಪ್ಪ, ಎ. ವಿ. ರಮೇಶ್ ಗೋಪಾಲಗೌಡ ಮುಂತಾದವರು ನಾಯಕತ್ವ ವಹಿಸಿದ್ದರು.

ಎಲ್ಲರಿಗೂ ಶಿಕ್ಷಣ; ಎಲ್ಲರಿಗೂ ಉದ್ಯೋಗ

(5ನೇ ಪುಟದಿಂದ)

ಮುಚ್ಚಲ್ಪಟ್ಟಿವೆ. ಲಕ್ಷಾವಧಿ ಕಾರ್ಮಿಕ ನೌಕರರು ಕೆಲಸ ಕಳೆದು ಕೊಂಡಿರುತ್ತಾರೆ.

ಕಾರ್ಮಿಕರ ವಿರುದ್ಧ ನಿರುದ್ಯೋಗಿಗಳನ್ನು ಎತ್ತಿಕಟ್ಟುವಪ್ರಯತ್ನ

ಮತ್ತೊಂದು ಆಶ್ಚರ್ಯ ಪಡುವ ವಿಷಯ ವೆಂದರೆ, ಉದ್ಯೋಗಿಗಳ ವಿರುದ್ಧ ನಿರುದ್ಯೋಗಿಗಳನ್ನು ಎತ್ತಿಕಟ್ಟುವುದಾಗಿದೆ. ಇತ್ತೀಚೆಗೆ ಶ್ರೀರಾಮಕೃಷ್ಣ ಹೆಗಡೆಯವರು ? ಸಂಘಟಿತ ಕಾರ್ಮಿಕರು ಚಳುವಳಿ ಹೂಡಿ ಎಲ್ಲಾ ಸವಲತ್ತು ಪಡೆದರೆ ಹಳ್ಳಿಯ ರೈತರ ಪಾಡೇನು ! ಎಂದು ಹೇಳಿದ್ದರು.

ಆಡಳಿತ ವರ್ಗದ ಹಲವು ವಲಯಗಳಲ್ಲಿ ಈ ಎತ್ತಿ ಕಟ್ಟುವ ಕುತಂತ್ರಗಳು ನಡೆಯುತ್ತಿವೆ. ಬ್ಯಾಂಕ್ ನೌಕರರ ವಿರುದ್ಧ ಇತ್ತೀಚೆಗೆನಿರುದ್ಯೋಗಿಗಳನ್ನು ಎತ್ತಿಕಟ್ಟಲಾದ್ದಿತು. ಅವರಿಗೇಕೆ ಸಾವಿರ ಸಂಬಳ ನಮಗೆ ಮುನ್ನೂರು ಕೊಡಿ ನಾವು ದುಡಿಯುತ್ತೇವೆ ಎಂದು ಕೆಲವು ನಿರುದ್ಯೋಗಿಗಳು ಬ್ಯಾಂಕ್ ಮುಂದೆ ಧರಣಿ ಹೂಡಿದ್ದ ನಿದರ್ಶನಗಳಿವೆ.

ಇಲ್ಲಿ ಶ್ರೀಹೆಗಡೆ ಮತ್ತವರ ವರ್ಗಕ್ಕೆ ಕೇಳಬೇಕಾದ ಪ್ರಶ್ನೆ ಏನೆಂದರೆ, ನಿಮ್ಮ ವೈಯುಕ್ತಿಕ ಆಸ್ತಿ ಎಷ್ಟು? ಹೆಚ್ಚಾಗಿರುವ ಸಂಪತ್ತನ್ನು ಇಲ್ಲದವರಿಗೆ ಹಂಚುವಿರಾ ಸರ್ಕಾರದ ವಶಿಯಲ್ಲಿರುವ ಸಹಸ್ರಾರು?ಹುದ್ದೆಗಳನ್ನು ಲಂಚರುಷುವತ್ತಿಲ್ಲದೆ ನಿರುದ್ಯೋಗಿಗಳಿಗೆ ನೀಡುವಿರಾ, ಸರ್ಕಾರಿ ಉದ್ಯಮಗಳಲ್ಲಿ ಸಹಸ್ರಾವಧಿಯಲ್ಲಿರುವ ಸ್ಥಳ ಫೆಂಡರಿಗಳೂ ಸ್ಥಳೀಯ ಅಭ್ಯರ್ಥಿಗಳನ್ನು ತ್ರಿಶಂಕು ಸ್ಥಿತಿಯಲ್ಲಿ ಏಕೆ ಇಟ್ಟದ್ದೀರಿ. ರಾಜೀವ್ ಗಾಂಧಿಯವರ ಉದ್ಯೋಗ ವಿರೋಧಿ ಮತ್ತು ರಾಷ್ಟ್ರ ವಿರೋಧಿ ಹೊಸ ಆರ್ಥಿಕ ನೀತಿ ಹಾಗೂ ಹೊಸ ಶಿಕ್ಷಣ ನೀತಿಗಳ ವಿರುದ್ಧ ಸೊಲ್ಲೆತ್ತಿಲ್ಲವೇಕೆ ? ಎಂದು.

ಈ ವರ್ಷ ಸೆಪ್ಟೆಂಬರ್ 23 ರಂದು ಡಿ.ವೈ.ಎಫ್.ಐ.ಮತ್ತುಎಸ್.ಎಫ್.ಐ. ಸಂಘಟನೆಗಳು ಜಂಟಿಯಾಗಿ ಐತಿಹಾಸಿಕವಾಗಿ ನಡೆಸಲಿರುವ ಬೃಹತ್ ವಿದ್ಯಾರ್ಥಿ-ಯುವಜನರ ರ್‍ಯಾಲಿಯು ತತ್ಸಂಬಂಧವಾಗಿ ನಡೆಯುತ್ತವೆ. ಅಷ್ಟು ಮಾತ್ರವಲ್ಲ ಲಂಚಗುಳಿತನ, ಭ್ರಷ್ಟತೆಗಳಿಂದ ಕೂಡಿರುವ ರಾಜೀವ್ ಗಾಂಧಿಯವರ ಕಾಂಗ್ರೆ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸುವ ಹೋರಾಟವಾಗಿದೆ.

○

[4ನೇ ಪುಟದಿಂದ]

ಜುಟ್ಟಿಗೆ ಮಲ್ಲಿಗೆ ಹೂ

ಣದ ನಿಯಮ ಜಾರಿಗೆ ಬರಲಿದೆ. ಶಿಕ್ಷಕರು ತಮಗಾದ ಅನ್ಯಾಯವನ್ನು ಪ್ರಶ್ನಿಸಿ ನ್ಯಾಯಲಯಗಳಮೆಟ್ಟಲೇರುವುದನ್ನು ನಿಷೇಧಿಸಲಾಗುತ್ತದೆ. ವಿದ್ಯಾಸಂಸ್ಥೆಗಳ ಆವರಣದಲ್ಲಿ ಪೋಲೀಸ್ ಠಾಣೆಗಳನ್ನು ನಿರ್ಮಿಸಲಾಗುತ್ತದೆ! ಅಂದರೆ ಬರಬಹುದಾದ ಅಪಾಯದ ಬಗ್ಗೆ ಯೋಚಿಸಿ ನೋಡಿ. ತುರ್ತು ಪರಿಸ್ಥಿತಿಯ ದಿನಗಳನ್ನು ನೀವು ಮರೆತಿಲ್ಲ ತಾನೇ?!

'ಹೊಟ್ಟೆಗೆ ಹಿಟ್ಟಿಲ್ಲ. ಆದರೂ ಜುಟ್ಟಿಗೆ ಮಲ್ಲಿಗೆ ಹೂ' ಎಂದೆನ್ನುವಂತೆ ಈ ಹೊಸ ಶಿಕ್ಷಣ ನೀತಿ ಹೇರಲ್ಪಟ್ಟಿದೆ.

○

(2ನೇ ಪುಟದಿಂದ)

ತ್ತಾಳೆ. ಹೋರಾಟವನ್ನು ದಮನ ಮಾಡಲಾಗುತ್ತದೆ.

ಸ್ಪೈಯಿನ್ ಮತ್ತು ಕ್ಯೂಬಾ ದೇಶಗಳ ಸಂಯುಕ್ತ ತಯಾರಿಕೆಯಾಗಿರುವ ಈ ಚಿತ್ರ ವಸಾಹತು ಆಳ್ವಿಕೆಯ ಉಗಮವನ್ನು, ಆ ಮೂಲಕ ಬಂಡವಾಳದ ಬೆಳವಣಿಗೆಗಾಗಿ ವಸಾಹತು ದೇಶಗಳಲ್ಲಿನ ಮಾನವ ಮತ್ತು ನಿಸರ್ಗ ಸಂಪತ್ತುಗಳನ್ನು ನಿರ್ದಯವಾಗಿ ಸೂರೆ ಮಾಡುವ ಕ್ರಿಯೆಯನ್ನು ತುಂಬಾ ಸಹಜವಾಗಿ ಮತ್ತು ಪರಿಣಾಮಕಾರಿಯಾಗಿ ಚಿತ್ರಿಸುತ್ತ ಸಾಗುತ್ತದೆ.

●

ದ. ಆಫ್ರಿಕಾ ಮತ್ತು ದ. ಕೋರಿಯಾ : ಕಾರ್ಮಿಕ ವರ್ಗ ಮುಂಚೂಣಿಗೆ

ದಕ್ಷಿಣ ಆಫ್ರಿಕಾದ ಕರಿಯ ಗಣಿ ಕಾರ್ಮಿಕರ ಮುಷ್ಕರದ ಬಗ್ಗೆ 'ಐಕ್ಯರಂಗ' ದ ಓದುಗರಿಗೆ ಈಗಾಗಲೇ ತಿಳಿದಿದೆ. ಮೂರು ವಾರಗಳ ಈ ಸಮರಶೀಲ ಹೋರಾಟ ಆಗಸ್ಟ್ 30 ರಂದು ಕೊನೆಗೊಂಡಿತು. ಬಿಳಿಯ ಮಾಲಕರು ವರ್ಣದ್ವೇಷಿ ಸರ್ಕಾರದ ಸಂಪೂರ್ಣ ನೆರವಿನೊಂದಿಗೆ ಮುಷ್ಕರ ಮುರಿಯಲು ತಮ್ಮ ಬಳಕೆಯಲ್ಲಿದ್ದ ಎಲ್ಲಾ ಅಮಾನುಷ ಅಸ್ತ್ರಗಳನ್ನು ಬಳಸಿದರೂ, ನಲ್ವತ್ತು ಸಾವಿರಕ್ಕೂ ಹೆಚ್ಚು ಕಾರ್ಮಿಕರನ್ನು ವಜಾಮಾಡಿ ಅವರ ಕುಟುಂಬಗಳನ್ನು ಹೊರಗಟ್ಟಿದರೂ ಜಗ್ಗದೆ ರಾಷ್ಟ್ರೀಯ ಗಣಿ ಕಾರ್ಮಿಕರ ಸಂಘದ ನೇತೃತ್ವದಲ್ಲಿ 3ಲಕ್ಷ 40 ಸಾವಿರ ಕಾರ್ಮಿಕರು ಹೋರಾಟ ಮುಂದುವರೆಸಿ ಕೊನೆಗೂ ಬಿಳಿಯ ಮಾಲಕರು ಸಂಘದ ಜೊತೆಗೆ ಒಂದು ಒಪ್ಪಂದಕ್ಕೆ ಬರುವಂತೆ ಮಾಡಿದರು.

ಸಾಮ್ರಾಜ್ಯಶಾಹಿ-ಬೆಂಬಲಿತ ವರ್ಣದ್ವೇಷಿ ಆಳ್ವಿಕೆಯ ವಿರುದ್ಧ ಕರಿಯ ಕಾರ್ಮಿಕರ ಹೋರಾಟ ದಕ್ಷಿಣ ಆಫ್ರಿಕಾದ ವಿಮೋಚನಾ ಹೋರಾಟಕ್ಕೆ ಒಂದು ಹೊಸ ತಿರುವು ನೀಡಿದರೆ, ಇನ್ನೊಂದು ಸಾಮ್ರಾಜ್ಯಶಾಹಿ ಬೆಂಬಲಿತ ಸರ್ವಾಧಿಕಾರವುಳ್ಳ ದಕ್ಷಿಣ ಕೋರಿಯದಲ್ಲೂ ಕಾರ್ಮಿಕ ವರ್ಗದ ಹೋರಾಟ ಇತ್ತೀಚೆಗಷ್ಟೇ ಸರ್ವಾಧಿಕಾರಿ ದೂ ಹ್ವಾನ್‌ನ ಹಿಡಿತವನ್ನು ಸ್ವಲ್ಪವಾದರೂ ಸಡಿಲಗೊಳಿಸುವಲ್ಲಿ ಅಲ್ಲಿನ ಪ್ರಜಾಪ್ರಭುತ್ವ ಆಂದೋಲನ ಯಶಸ್ವಿಯಾಗಿರುವ ಹಿನ್ನೆಲೆಯಲ್ಲಿ ಬಹಳ ಮಹತ್ವಪೂರ್ಣ. ತೀವ್ರ ಕೈಗಾರಿಕೀಕರಣದ, ರಫ್ತು ಆಧಾರಿತ ಅಭಿವೃದ್ಧಿಯ ಅತ್ಯುತ್ತಮ ಉದಾಹರಣೆಯೆಂದು ಜಗತ್ತಿನ ಬಂಡವಾಳಶಾಹಿಗಳೆಲ್ಲಾ ತೃತೀಯ ಜಗತ್ತಿನ ದೇಶಗಳಿಗೆ ದಕ್ಷಿಣ ಕೊರಿಯಾವನ್ನು ತೋರಿಸುವುದು ಪರಿಪಾಠವಾಗಿ ಬಿಟ್ಟಿದೆ. ಆದರೆ ಕೈಗಾರಿಕೀಕೃತ ದೇಶಗಳಲ್ಲೇ ಅತ್ಯಂತ ಕಡಿಮೆ ಕೂಲಿ ಪಡೆಯುವ, ಅತ್ಯಂತ ಹೆಚ್ಚು ಕಾಲ, ಅತ್ಯಂತ ಅಪಾಯಕಾರೀ ಪರಿಸ್ಥಿತಿಗಳಲ್ಲಿ ದುಡಿಯುವ ಅಲ್ಲಿನ ಕಾರ್ಮಿಕರ ಎಲುಬುಗಳ ಮೇಲಷ್ಟೇ ಈ "ಅಮೋಘ ಅಭಿವೃದ್ಧಿ" ಸಾಧ್ಯವಾಗಿರುವುದು. ಇತ್ತೀಚೆಗೆ ಅಲ್ಲಾ ಒಂದು ಉದ್ಯಮದಿಂದ ಇನ್ನೊಂದು ಉದ್ಯಮಕ್ಕೆ ಕಾಡ್ಗಿಚ್ಚಿನಂತೆ ಹರಡುತ್ತಿರುವ ಮುಷ್ಕರಗಳ ಸರಮಾಲೆ ಇದನ್ನು ಸ್ಪಷ್ಟಗೊಳಿಸಿದೆ. ಆಗಸ್ಟ್15 ರಂದು ಹತ್ತು ಸಾವಿರ ಕಾರ್ಮಿಕರು ಅಮೇರಿಕನ್ ಸಾಮ್ರಾಜ್ಯಶಾಹಿ ಮತ್ತು ದಕ್ಷಿಣ ಕೋರಿಯಾದ ಸರ್ವಾಧಿಕಾರಿಯ ವಿರುದ್ಧ ಭಾರಿಮಳೆಯನ್ನೂ ಲೆಕ್ಕಿಸದೆ ಮತ ಪ್ರದರ್ಶನ ನಡೆಸಿದರೆ, ಆಗಸ್ಟ್ 17ರಂದು 34 ಸಾವಿರ ಕಾರ್ಮಿಕರು ಹ್ಯುಂದಾಯೀ ಹಡಗು ಕಟ್ಟೆ ಹಾಗೂ ಸುತ್ತಮುತ್ತಲಿನ ಕಾರ್ಖಾನೆಗಳನ್ನು ವಶಪಡಿಸಿಕೊಂಡು ಬ್ಯಾರಿಕೇಡ್‌ಗಳನ್ನು ನಿರ್ಮಿಸಿ ಸರ್ವಾಧಿಕಾರಿಯ ಸಶಸ್ತ್ರ ಪೋಲೀಸರೊಂದಿಗೆ ಕಾದಾಡಿದರು.

ವಿದ್ಯಾರ್ಥಿಗಳ ಸಾಮ್ರಾಜ್ಯಶಾಹಿ ವಿರೋಧಿ ಭಾವನೆಗಳೊಂದಿಗೆ ಕಾರ್ಮಿಕರ ಈ ರೀತಿಯ ಸಮರಶೀಲ ಹೋರಾಟ ಬೆರೆತರೆ ತನಗೆ ಉಳಿಗಾಲವಿಲ್ಲವೆಂಬುದನ್ನು ಅರಿಯಲಾರಂಭಿಸಿರುವ ಸರ್ವಾಧಿಕಾರೀ ಆಡಳಿತ ಈ ಮಧ್ಯ ಪ್ರವೇಶಿಸಿ ಅತ್ಯಂತ ದಮನಕಾರೀ ಮಾಲಕರೂ ಕೂಡಾ ಕಾರ್ಮಿಕರ ಸಂಘಟನೆಯ ಹಕ್ಕುಗಳನ್ನು ಒಪ್ಪಿಕೊಳ್ಳಬೇಕಾದ ಪರಿಸ್ಥಿತಿ ಈ ದೇಶದಲ್ಲಿ ಮೊತ್ತ-ಮೊದಲ ಬಾರಿಗೆ ಸೃಷ್ಟಿಯಾಗುತ್ತಿದೆ. ತಾವೊಂದು ಶಕ್ತಿಯಾಗಿ ಬೆಳೆಯಲು ಸಾಧ್ಯ ಎಂಬುದನ್ನು ದಕ್ಷಿಣ ಕೋರಿಯಾದ ಕಾರ್ಮಿಕರು ಅರಿಯಲಾರಂಭಿಸಿದ್ದಾರೆ ಎಂದು ಫ್ರೆಂಚ್ ಪತ್ರಿಕೆ 'ಲೆ ಮೂಂಡೇ' ಕೂಡಾ ಅಭಿಪ್ರಾಯಪಟ್ಟಿದೆ. ನಿಜವಾಗಿಯೂ ದಕ್ಷಿಣ ಕೋರಿಯಾದ ಕಾರ್ಮಿಕರ ಹೋರಾಟ ದಕ್ಷಿಣ ಆಫ್ರಿಕಾದ ಕರಿಯ ಕಾರ್ಮಿಕರ ಹೋರಾಟದಂತೆ ತಮ್ಮ ದೇಶದ ಚರಿತ್ರೆಯನ್ನೇ ಬದಲಿಸಬಲ್ಲ ಹಂತ ತಲುಪಿದೆ. ●

ಸಾಮ್ರಾಜ್ಯಶಾಹಿಗಳ ಯುದ್ಧಕೋರತನ

ನಿಶ್ಶಸ್ತ್ರೀಕರಣ ಮತ್ತು ಅಭಿವೃದ್ಧಿಯ ನಡುವೆ ಏನಾದರೂ ಸಂಬಂಧವಿದೆಯೇ? ವಿಶ್ವಸಂಸ್ಥೆಯ 153 ಸದಸ್ಯರಾಷ್ಟ್ರಗಳು ಭಾಗವಹಿಸಿದ್ದ ನಿಶ್ಶಸ್ತ್ರೀಕರಣ ಮತ್ತು ಅಭಿವೃದ್ಧಿ' ಬಗ್ಗೆ ನಡೆದ ಮೊದಲ ಅಂತರರಾಷ್ಟ್ರೀಯ ಸಮ್ಮೇಳನ ಈ ಬಗ್ಗೆ ತೀವ್ರವಾಗಿ ಚರ್ಚಿಸಿ ಕೊನೆಗೂ ಇವೆರಡರ ನಡುವೆ ನೇರ ಹಾಗೂ ಸ್ಪಷ್ಟವಾದ ಸಂಬಂಧವಿದೆಯೆಂದು ಅಂತರರಾಷ್ಟ್ರೀಯ ಸಮುದಾಯ ಒಪ್ಪಿಕೊಳ್ಳುವಂತಾಗಿದೆ.

ಇಂತಹ ಯಾವ ಸಂಬಂಧವು ತನಗೆ ಕಾಣಿಸುತ್ತಿಲ್ಲವೆಂದು ಅಮೆರಿಕಾ ಈ ಸಮ್ಮೇಳನವನ್ನೇ ಬಹಿಷ್ಕರಿಸಿತ್ತು. ಅದರ ಮಿತ್ರ ರಾಷ್ಟ್ರಗಳಾದ ಬ್ರಿಟನ್ ಫ್ರಾನ್ಸ್ ಮತ್ತು ಪಶ್ಚಿಮಜರ್ಮನಿ ಸಮ್ಮೇಳನದಲ್ಲೇನೋ ಭಾಗವಹಿಸಿದ್ದವು ಆದರೆ ಸಮ್ಮೇಳನ ಈ ಬಗ್ಗೆ ಒಂದು ಸರಳ ಒಮ್ಮತಕ್ಕೆ ಬರದಂತೆ ತಡೆಯಲು ಸರ್ವಪ್ರಯತ್ನ ನಡೆಸಿ ವಿಫಲವಾದವು. ಇನ್ನೊಂದು ಗಮನಾರ್ಹ ಸಂಗತಿಯೆಂದರೆ ತಮ್ಮ ಸರ್ಕಾರ ಈ ಸಮ್ಮೇಳನವನ್ನು ಬಹಿಷ್ಕರಿಸಿದ್ದರಿಂದ ಕುಪಿತಗೊಂಡ ಸುಮಾರು 50 ಅಮೇರಿಕನ್ ಸಂಘಟನೆಗಳಪ್ರತಿನಿಧಿಗಳು ವಿಶ್ವಸಂಸ್ಥೆಯ ಮುಖ್ಯ ಕಛೇರಿಗೆ ಬಂದು ಸಮ್ಮೇಳನಕ್ಕೆ ಬೆಂಬಲ ನೀಡಿದರು. ●

ಸಂಕ್ಷಿಪ್ತ ಸುದ್ದಿಗಳು

★ ಸೆಪ್ಟೆಂಬರ್ 2 ರಂದು ವಿಯೆಟ್ನಾಂ ತನ್ನ ಸ್ವಾತಂತ್ರ್ಯ ಘೋಷಣೆಯ 42ನೇ ವಾರ್ಷಿಕೋತ್ಸವವನ್ನು ಬಲ್ಗೇರಿಯಾ ಫ್ಯಾಸಿಸ್ಟ ನೊಗದಿಂದ ವಿಮುಕ್ತಿಯ 43ನೇ ವಾರ್ಷಿಕೋತ್ಸವವನ್ನು ಹಾಗೂ ಉತ್ತರ ಕೊರಿಯಾ ಸೆಪ್ಟೆಂಬರ್ 6 ರಂದು ಜನತಾ ಪ್ರಜಾಪ್ರಭುತ್ವದ ಸ್ಥಾಪನೆಯ 39ನೇ ವಾರ್ಷಿಕೋತ್ಸವವನ್ನು ಆಚರಿಸಿದವು. ಈ ಸಂದರ್ಭದಲ್ಲಿ ಸಿ.ಪಿ.ಐ. [ಎಂ] ಆ ದೇಶಗಳ ಜನತೆ ಹಾಗೂ ಕಮ್ಯೂನಿಸ್ಟ್ ಪಕ್ಷಗಳಿಗೆ ಹಾರ್ದಿಕ ಶುಭಾಶಯಗಳನ್ನು ಕೋರಿದೆ.

★ ಫಿಜಿಯಲ್ಲಿ ಇತ್ತೀಚೆಗೆ ಪ್ರಜಾಪ್ರಭುತ್ವದ ಕತ್ತು ಹಿಸುಕಿದ ಕ್ಷಿಪ್ರ ಕ್ರಾಂತಿ ಹಾಗೂ ಅದಕ್ಕೆ ಪೂರ್ವಭಾವಿಯಾಗಿ ನಡೆದ ಜನಾಂಗೀಯ ಹಿಂಸಾಚಾರಗಳಲ್ಲಿ ಅಮೆರಿಕಾದ ಸಿ.ಐ.ಎ.ನ ಕೈವಾಡವಿತ್ತೆಂದೂ, ಫಿಲಿಪ್ಪೈನ್ಸ್‌ನಲ್ಲಿ ಮಾರ್ಕೋಸ್ ಪತನದ ನಂತರ ಹೊಸ ಸೈನಿಕನೆಲೆಗಳನ್ನು ಪಡೆಯುವ ಅಮೇರಿಕಾದ ಕಾತುರವೇ ಇದಕ್ಕೆ ಕಾರಣವೆಂದೂ ನ್ಯೂಯಾರ್ಕ್‌ನ"ದಿನೇಶ್‌ನ್" ಪತ್ರಿಕೆ ಪುರಾವೆ ಸಹಿತ ಹೇಳಿದೆ.

★ ಪಶ್ಚಿಮ ಯುರೋಪಿನ ದೇಶಗಳ ನಿರುದ್ಯೋಗಿಗಳ ಸಂಖ್ಯೆ ಜುಲೈ ಅಂತ್ಯದೊಳಗೆ 1 ಕೋಟಿ 56 ಲಕ್ಷ ಎಂದು ಯುರೋಸ್ಟಾಟ್ ಸಂಸ್ಥೆ ತಿಳಿಸಿದೆ.

★ "ಜರ್ಮನ್ ನೆಲದಿಂದ ಮತ್ತೊಮ್ಮೆ ಯುದ್ಧ ಹೊಮ್ಮದೆ ಶಾಂತಿಯಷ್ಟೇ ಚಿಮ್ಮುವಂತೆ ಮಾಡುವುದು ಎರಡೂ ಜರ್ಮನಿಗಳ ಜವಾಬ್ದಾರಿ ಇದನ್ನು ಹೇಗೆ ನಿಭಾಯಿಸಬಹುದೆಂದೂ ಪರಿಶೀಲಿಸುವುದೇನನ್ನ ಮುಖ್ಯಗುರಿ" ಎಂದು ಪೂರ್ವಜರ್ಮನಿಯ ಅಧ್ಯಕ್ಷ ಎರಿಕ್‌ಹೋನೇಕರ್ ಪಶ್ಚಿಮ ಜರ್ಮನಿಯ ತನ್ನ ಮೊತ್ತಮೊದಲ ಭೇಟಿ ಕಾಲದಲ್ಲಿ ಹೇಳಿದ್ದಾರೆ. ●

ತ್ರಿಪುರದಲ್ಲಿ ಕಾಂಗ್ರೆಸ್ ಭಯೋತ್ಪಾದಕ ನೀತಿ

ಕಾಂಗ್ರೆಸ್ (ಐ) ನ ತ್ರಿಪುರ ರಾಜ್ಯ ಘಟಕವು ಬಹುದಿನಗಳಿಂದಲೂ ರಾಜ್ಯದ ಎಡರಂಗ ಸರ್ಕಾರಕ್ಕೆದುರಾಗಿ ಭಯೋತ್ಪಾದನಾ ತಂತ್ರವನ್ನು ಅನುಸರಿಸುತ್ತಿದೆ. ರಾಜ್ಯ ವಿಧಾನ ಸಭೆಗೆ ಶೀಘ್ರದಲ್ಲೇ ಚುನಾವಣೆಗಳು ನಡೆಯಲಿದ್ದು ಕಾಂಗ್ರೆಸ್ ತನ್ನ ಭಯೋತ್ಪಾದನಾ ಚಟುವಟಿಕೆಗಳನ್ನು ತೀವ್ರಗೊಳಿಸಿದೆ. ಇತ್ತೀಚಿನ ಕೆಲವು ಘಟನೆಗಳನ್ನು ಕುರಿತು ಸಿ.ಪಿ.ಐ. (ಎಂ) ನ ರಾಜ್ಯ ಸಮಿತಿ ಹೇಳಿಕೆಗಳನ್ನು ನೀಡಿದೆ.

ಉದಯಪುರ ಕಾಲೇಜಿನಲ್ಲಿ ಎರಡು ವಿದ್ಯಾರ್ಥಿ ಗುಂಪುಗಳ ನಡುವೆ ಸಂಭವಿಸಿದ ಘರ್ಷಣೆಯಲ್ಲಿ ಓರ್ವ ವಿದ್ಯಾರ್ಥಿ ಸತ್ತು ಇನ್ನಿಬ್ಬರು ತೀವ್ರಗಾಯಗೊಂಡಿದ್ದಾರೆ. ಈ ಘರ್ಷಣೆಯಲ್ಲಿ ಕಾಂಗ್ರೈನ ವಿದ್ಯಾರ್ಥಿ ರಂಗವಾದ ಎನ್.ಎಸ್.ಯು.ಐ. ಮತ್ತು ಕಾಂಗ್ರೈ ಗೂಂಡಾಗಳು ಅನುಸರಿಸಿದ ಪೈಶಾಚಿಕ ಕೃತ್ಯಗಳನ್ನು ಬಣ್ಣಿಸಲು ಪದಗಳೇ ಸಿಗದಂತಾಗಿದೆಯೆಂದು ಸಿ.ಪಿ.ಐ.(ಎಂ) ತಿಳಿಸಿದೆ.

ಸಿ.ಪಿ.ಐ. (ಎಂ)ನ ಮಾಜೀ ವಿಧಾನಸಭಾ ಸದಸ್ಯರಾದ ನರೇಶ ಘೋಶ್ ಬಹುದಿನಗಳಿಂದ ಹಾಸಿಗೆಹಿಡಿದಿದ್ದಾರೆ. ಕಾಂಗ್ರೈ ಗೂಂಡಾಗಳು ಬಲವಂತವಾಗಿ ಅವರ ಮನೆಗೆ ನುಗ್ಗಿ ಅವರ ಮೇಲೆ ಆಕ್ರಮಣ ಎಸಗಿದ್ದು ಅವರ ಕೈಗಳಿಗೆ ತೀವ್ರವಾದ ಗಾಯಗಳಾಗಿವೆ.

ಜಮ್‌ಕಾಲಿ ಎಂಬಲ್ಲಿ ತ್ರಿಪುರ, ಮೋಟಾರ್ ವರ್ಕರ್ಸ್ ಯೂನಿಯನ್' ಕಛೇರಿಯ ಮೇಲೆ ದಾಳಿ ನಡೆದಿದೆ. ಎರಡು ಬಸ್ ಮತ್ತು ಜೀಪ್‌ಗಳನ್ನು ನಾಶಗೊಳಿಸಲಾಗಿದೆ. ಪ್ರಯಾಣಿಕರನ್ನು ಥಳಿಸಲಾಗಿದೆ. ಧ್ವಜ ನಗರ ಪಂಚಾಯತ್ ಅಧ್ಯಕ್ಷರ ಮೇಲೆ ಹಲ್ಲೆ ನಡೆಸಲಾಗಿದೆ. ಆದರೆ ಆಶ್ಚರ್ಯವೆಂದರೆ ಪೋಲೀಸರು ಗೂಂಡಾಗಳನ್ನು ಬಂಧಿಸದೆ ಅಧ್ಯಕ್ಷರನ್ನು ಬಂಧಿಸಿದ್ದಾರೆ. ಸಿ.ಪಿ.ಐ. (ಎಂ) ಬೆಂಬಲಿಗರ ಅಂಗಡಿಗಳನ್ನು, ಆಸ್ತಿ ಪಾಸ್ತಿಗಳನ್ನು ಕಾಂಗ್ರೈ ರೌಡಿಗಳು ಲೂಟಿ ಮಾಡಿದ್ದಾರೆ. ಅಲ್ಲಿನ 10-12 ಮನೆಗಳಿಗೆ ಬೆಂಕಿಯಿಕ್ಕಿದ್ದಾರೆ. ಕಾಂಗ್ರೈ ಗೂಂಡಾಗಳು 3 ಗಂಟೆಗೂ ಹೆಚ್ಚು ಕಾಲ ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದರೂ ಕೂಡ ಪೋಲೀಸರು ಮೌನವಾಗಿದ್ದರು. ಯಾರೊಬ್ಬರನ್ನೂ ಬಂಧಿಸಲಿಲ್ಲ. ಅದೇ ಸಮಯದಲ್ಲಿ ಕಾಂಗ್ರೆಸ್ (ಐ) ನ ವಿಧಾನ ಸಭಾ ಸದಸ್ಯ ಮೋತಿ ಸಹಾ ಆ ಸ್ಥಳಕ್ಕೆ ಬಂದು ಗೂಂಡಾಗಳೊಂದಿಗೆ ಸೇರಿಕೊಂಡು ಅವರನ್ನು ಉದ್ರೇಕಿಸುತ್ತಿದ್ದರೆಂಬುದು ಗಮನಾರ್ಹ ಅಂಶ. ನಂತರ ಆ ಪ್ರದೇಶದಲ್ಲಿ ಕರ್ಫ್ಯೂ ಜಾರಿ ಮಾಡಲಾಯಿತಾದರೂ ಗೂಂಡಾಗಳು ಅದನ್ನೂ ಉಲ್ಲಂಘಿಸಿ ತಮ್ಮ ಲೂಟಿ ದೊಂಬಿಗಳನ್ನು ಮುಂದುವರಿಸಿರು. ನಂತರ ಈ ಗುಂಪು ಹರೀಶ್ ಚಂದ್ರ ಬಲ್ ಎಂಬುವರನ್ನು ಸಿಕ್ಕಾಪಟ್ಟೆ ಥಳಿಸಿತು. ನಂತರ ಅವರು ಆಸ್ಪತ್ರೆಯಲ್ಲಿ ಸತ್ತರು. ಅವರು ಮಾಡಿದ ಒಂದೇ ತಪ್ಪೆಂದರೆ ಅವರ ಹಿಂದೆ ಕಾಂಗ್ರೆಸಿಗರಾಗಿದ್ದು ಎಡರಂಗದ ಬೆಂಬಲಿಗರಾಗಿದ್ದು.

ಈ ಮೇಲಿನ ಘಟನೆಗಳೆಲ್ಲಾ ಮುಂಬರುವ ಚುನಾವಣೆಯನ್ನು ಅಸ್ತವ್ಯಸ್ತಗೊಳಿಸುವ ಉದ್ದೇಶದಿಂದಲೇ ಯೋಜಿತಗೊಂಡವೆಂಬುದು ಸ್ಪಷ್ಟವಾಗುತ್ತದೆ. ಕಾಂಗ್ರೈ ತನ್ನೆಲ್ಲಾ ಆಯುಧಗಳನ್ನು ಹರಿತಗೊಳಿಸಿಕೊಂಡು ಎಡರಂಗದ ವಿರುದ್ಧ ಆಕ್ರಮಣವನ್ನು ಆರಂಭಿಸಿದೆ. ಅಲ್ಲದೆ ತಮ್ಮ ರಾಜ್ಯಕ್ಕೆ ರೈಲು ಮಾರ್ಗ ಮತ್ತು ಕಾರ್ಖಾನೆಗಳು ಬೇಕೆಂದು ಒತ್ತಾಯಿಸಿ ಜನತೆಯು ನಡೆಸುತ್ತಿರುವ ಚಳವಳಿಯನ್ನು ಮುರಿಯಲು ತನ್ನ ಭಯೋತ್ಪಾದನೆಯನ್ನು ಆರಂಭಿಸಿದೆ.

ಒರಿಸ್ಸಾ

ಕಾಲಾಹಂಡಿ ಮತ್ತು ಕೋರಾಪಟ್ ಜಿಲ್ಲೆಗಳ ಕ್ಷಾಮ ಪೀಡಿತ ಬಡ ಜನರನ್ನು ಹಸಿವು ಮತ್ತು ಸಾವಿನಿಂದ ಉಳಿಸಬೇಕೆಂದು ಆಗ್ರಹಪಡಿಸಿ ಒರಿಸ್ಸಾದ ಜಾತ್ಯಾತೀತ ವಿರೋಧ ಪಕ್ಷಗಳಾದ ಸಿ.ಪಿ.ಐ. (ಎಂ), ಸಿ.ಪಿ.ಐ. ನಂದಿನಿ ಸತ್ಪತಿ ನೇತೃತ್ವದ ಜಾಗೃತ್ ಒರಿಸ್ಸಾ, ಲೋಕದಳ(ಎ), ಲೋಕದಳ (ಬಿ) ಮತ್ತು ಫಾರ್ವರ್ಡ್ ಬ್ಲಾಕ್ ಪಕ್ಷಗಳು ಇತ್ತೀಚೆಗೆ ಬೃಹತ್ ಪ್ರದರ್ಶನವನ್ನೇರ್ಪಡಿಸಿದ್ದವು. ಐದು ಸಾವಿರ ಜನರ ಬೃಹತ್ ಮೆರವಣಿಗೆ ನಡೆಯಿತು. ನಂತರ ನಡೆದ ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಸಿ.ಪಿ.ಐ. (ಎಂ) ನ ಕಾ. ಶಿವಾಜಿ ಪಟ್ನಾಯಕ್, ಲೋಕದಳ (ಬಿ) ಯ ಮೀನಾಕೇತನ, ಲೋಕದಳ (ಎ)ನ ಯುಧಿಷ್ಟರ ದಾಸ್, ಜಾಗೃತ ಒರಿಸ್ಸಾದ ನಂದಿನಿ ಸತ್ಪತಿ, ಸಿ.ಪಿ.ಐ.ನ ದುಶ್ಯಾಸನ ಜೇನಾ, ಫಾರ್ವರ್ಡ್ ಬ್ಲಾಕ್‌ನ ಗಂಗಾಧರ ಬಸ್ತಿಯಾ ಮುಂತಾದವರು ಮಾತನಾಡಿ ಬರಗಾಲ ಕುರಿತಂತೆ ರಾಜ್ಯ ಕಾಂಗ್ರೈ ಸರ್ಕಾರದ ನಿಷ್ಕ್ರಿಯತೆ ಖಂಡಿಸಿ ವಿಧಾನ ಸಭೆಗೆ ಮಧ್ಯಂತರ ಚುನಾವಣೆಗೆ ಆಗ್ರಹ ಪಡಿಸಿದರು.

ತಮಿಳುನಾಡಿನಲ್ಲಿ ರೈತರ ಬಂಧನ

ಸೆಪ್ಟೆಂಬರ್ 7 ರಿಂದ 13ರ ವರೆಗೆ ದೇಶಾದ್ಯಂತ ನಡೆದ ರೈತರ ಚಳವಳಿಯ ಅಂಗವಾಗಿ ತಮಿಳುನಾಡಿನಾದ್ಯಂತ ಸಾವಿರಾರು ರೈತರು, ಕೃಷಿ ಕೂಲಿಕಾರರು ಸರ್ಕಾರೀ ಕಛೇರಿಗಳ ಮುಂದೆ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು. ಗಣನೀಯ ಸಂಖ್ಯೆಯಲ್ಲಿ ಮಹಿಳೆಯರೂ ಇದರಲ್ಲಿ ಭಾಗವಹಿಸಿದರು. ಮದರಾಸಿನಲ್ಲಿ ನಡೆದ ಪಿಕೆಟಿಂಗ್ ನೇತೃತ್ವವನ್ನು ಕಿಸಾನ್ ಸಭಾ ರಾಜ್ಯ ಕಾರ್ಯದರ್ಶಿ ಹಾಗೂ ವಿಧಾನ ಸಭಾ ಸದಸ್ಯರಾದ ವೀರಯ್ಯನ್, ಮೀನಾಕ್ಷಿ ಸುಂದರಂ, ಮೈಥಿಲಿ ಶಿವರಾಮನ್, ಜಾನಕಿ ರಾಮಚಂದ್ರನ್ ವಹಿಸಿದ್ದರು. 60 ಮಂದಿ ಮಹಿಳೆಯರೂ ಸೇರಿದಂತೆ 350 ಮಂದಿಯನ್ನು ಪೋಲೀಸರು ಬಂಧಿಸಿದರು.

ಮದುರೈ ಜಿಲ್ಲೆಯಲ್ಲಿ ವಿವಿಧ ಭಾಗಗಳಲ್ಲಿ ನಡೆದ ಪಿಕೆಟಿಂಗ್‌ನಲ್ಲಿ 636 ಮಂದಿ ಬಂಧನಕ್ಕೊಳಗಾದರು. ಸೇಲಂ ಜಿಲ್ಲೆಯಲ್ಲಿ ಒಟ್ಟು 1072 ಮಂದಿ ಬಂಧನಕ್ಕೊಳಗಾದರು. ಕೊಯಮತ್ತೂರು ಜಿಲ್ಲೆಯಲ್ಲಿ 1288 ಮಂದಿ ದಸ್ತಗಿರಿಯಾದರು. ನೀಲಗಿರಿ ಜಿಲ್ಲೆಯಲ್ಲಿ 116 ಮಂದಿ, ದಿಂಡುಕಲ್‌ನಲ್ಲಿ 574 ಮಂದಿ, ಪಳನಿಯಲ್ಲಿ 404ಮಂದಿ ವೆಡಚಂದೂರ್‌ನಲ್ಲಿ 212 ಮಂದಿ ಬಂಧನಕ್ಕೊಳಗಾದರು. ತೆನ್ನಾರ್ಕಾಡು ಜಿಲ್ಲೆಯ ಕಡಲೂರಿನಲ್ಲಿ 235 ಮಂದಿ ಚಿದಂಬರಂನಲ್ಲಿ 200 ಮಂದಿ ಬಂಧನಕ್ಕೊಳಪಟ್ಟರು ತಂಜಾವೂರು ಜಿಲ್ಲೆಯಾದ್ಯಂತ ಒಟ್ಟು 2,605 ಮಂದಿ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು. ತಿರುಚಿನಾಪಳ್ಳಿಯ ಜಿಲ್ಲೆಯಲ್ಲಿ 1401 ಮಂದಿಬಂಧನಕ್ಕೊಳಗಾಗಿದ್ದಾರೆ ಪೆರಿಯಾರ್ ಜಿಲ್ಲೆಯಲ್ಲಿ 247 ಮಂದಿ ಬಂಧನಕ್ಕೊಳಗಾದರು. ರಾಜ್ಯದ ಇನ್ನೂ ಅನೇಕ ಭಾಗಗಳಲ್ಲಿ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದಿರುವುದಾಗಿ ತಿಳಿದುಬಂದಿದೆ. ●

REG No. BGW-148 MAG (2) PRB DECR 319/-78-79

ಭ್ರಮಾಲೋಕದಲ್ಲಿರುವುದು ಯಾರು ?

(1ನೇ ಪುಟದಿಂದ)

ತನ್ನಷ್ಟಕ್ಕೆ ಏನೂ ಅರ್ಥವಿಲ್ಲ ಕೆಳಕಂಡ ನೀತಿಗಳ ಬಗ್ಗೆ ಯಾವ ಸ್ಪಷ್ಟ ನಿಲುವು ತೆಗೆದು ಕೊಳ್ಳುತ್ತಾರೆ ಎಂಬುದರ ಮೇಲೆ ಇದು ಅವಲಂಬಿತವಾಗಿದೆ. ಬಿಜೆಪಿ ಹಾಗೂ ಎಡ ಪಕ್ಷಗಳ ನಡುವೆ ಇರುವ ಮುಖ್ಯ ವ್ಯತ್ಯಾಸವೂ ಇದೇ.

1. ವಿದೇಶ ನೀತಿ

ಜವಾಹರಲಾಲ ನೆಹರೂನಿಂದ ರಾಜೀವ್ ಗಾಂಧಿಯವರೆಗಿನ ಎಲ್ಲಾ ಪ್ರಧಾನ ಮಂತ್ರಿಗಳ ಅಲಿಪ್ತ ನೀತಿ, ಹೊಸಾಹತುಶಾಹಿ ವಿರೋಧಿ ನೀತಿ ಮತ್ತು ವಿಶ್ವಶಾಂತಿಯ ನೀತಿಯಿಂದೊಡಗೂಡಿದ ವಿದೇಶಾಂಗ ನೀತಿಗೆ ಎಡ ಪಕ್ಷಗಳು ಟೀಕಾತ್ಮಕ ಬೆಂಬಲ ಕೊಡುತ್ತಾ ಬಂದಿವೆ. ಆದರೆ ಬಿ.ಜೆ.ಪಿ. ಈ ನೀತಿಗೆ ಸಂಪೂರ್ಣ ವಿರೋಧ ವ್ಯಕ್ತಪಡಿಸಿದೆ.

2 ರಾಷ್ಟ್ರೀಯ ಐಕ್ಯತೆ

ಇನ್ನೂ ಹೊರಗಿನಿಂದ ಸಾಮ್ರಾಜ್ಯಶಾಹಿ ಮತ್ತು ಒಳಗಿನಿಂದ ಜಾತಿ, ಕೋಮುವಾದಿಗಳಿಂದ ಆಕ್ರಮಣಕ್ಕೊಳಗಾಗಿರುವ ರಾಷ್ಟ್ರೀಯ ಐಕ್ಯತೆ ಬಗ್ಗೆ ಎಡ ಪಕ್ಷಗಳು ಸ್ಪಷ್ಟ ನಿಲುವು ತೆಗೆದುಕೊಂಡಿವೆ. ಆದರೆ ಬಿ.ಜೆ.ಪಿ. ತಾನು ಹಿಂದೂ ಪುನರುತ್ಥಾನವಾದಿ ಸಂಘಟನೆಯೆಂದು ಈಗಾಗಲೇ ಸಿದ್ಧಪಡಿಸಿಕೊಂಡಿದೆ. ರಾಮ ಜನ್ಮ ಭೂಮಿ ಬಾಬ್ರಿ ಮಸೀದಿ ವಿವಾದ ಮತ್ತು ಮುಸ್ಲಿಂ-ವಿರೋಧಿ ದಂಗೆ ಮುಂತಾದ ಕ್ಷೋಭೆ ಹರಡಲು ಜವಾಬ್ದಾರವಾಗಿರುವ ಆರ್.ಎಸ್.ಎಸ್, ಬಿ.ಜೆ.ಪಿ.ಯ ನಿಜವಾದ ಸೈದ್ಧಾಂತಿಕ ನಾಯಕ ಮತ್ತು ಮಾರ್ಗದರ್ಶಕ. ಎಡ ಪಕ್ಷಗಳು ಹಿಂದೂ, ಮುಸ್ಲಿಂ, ಸಿಖ್‌ಮತ್ತಿತರ ಎಲ್ಲಾ'ಕೋಮು'ಕೋಮುವಾದದ ವಿರುದ್ಧ ಎಗ್ಗಿಲ್ಲದೆ ಹೋರಾಡುತ್ತಿದೆ. ಈ ಹೋರಾಟ ಬಿ.ಜೆ.ಪಿ.ಯ ಸ್ವಭಾವದಿಂದಾಗಿ ಅದರ ವಿರುದ್ಧ ಸಹ.

3. ಕೇಂದ್ರ ರಾಜ್ಯ ಸಂಬಂಧಗಳು

ರಾಷ್ಟ್ರೀಯ ಐಕ್ಯತೆಗೆ ಎಡ ಮತ್ತು ಪ್ರಜಾಪ್ರಭುತ್ವ ಜಾತ್ಯಾತೀತ ಪಕ್ಷಗಳು ಬದ್ಧವಾಗಿವೆ. ಸ್ವಾಯತ್ತ ರಾಜ್ಯಗಳಿಂದ ಕೂಡಿದ ಪರಿಣಾಮಕಾರಿ ಕೇಂದ್ರ, ರಾಷ್ಟ್ರೀಯ ಐಕ್ಯತೆಗೆ ಇದು ಬೇಕಾಗಿದೆ. ಇದು ಕಾಂಗ್ರೆಸ್ ಅದರೊಟ್ಟಿಗೆ ಬಿ ಜೆ.ಪಿ. ಸಹ ಪ್ರತಿವಾದಿಸುತ್ತಿರುವ ಅಧಿಕಾರಶಾಹೀ ಕೇಂದ್ರಕ್ಕೆ ವಿರುದ್ಧವಾದುದು. ಕೇಂದ್ರವನ್ನು ಪೂರ್ಣವಾಗಿ ಕಿಮ್ಮತ್ತಿಲ್ಲದಂತೆ ಮಾಡುವ ಕೆಲವು ಪ್ರಾದೇಶಿಕ ಪಕ್ಷಗಳು ಪ್ರತಿಪಾದಿಸುವ ನೀತಿಗೂ ಇದು ವಿರುದ್ಧವಾದುದು.

4. ಜನರ ಜ್ವಲಂತ ಸಾಮಾಜಿಕ-ಆರ್ಥಿಕ ಸಮಸ್ಯೆಗಳು

ಕಾಂಗ್ರೆಸ್ ಸರ್ಕಾರ ಅನುಸರಿಸುತ್ತಿರುವ ಬಂಡವಾಳಶಾಹೀ ಪಥಕ್ಕೆ ಎಡ ಪಕ್ಷಗಳು ವಿರೋಧ ಸೂಚಿಸುತ್ತವೆ. ಕೇಂದ್ರ ಸರ್ಕಾರ ಮತ್ತು ಯೋಜನಾ ಆಯೋಗದ ತಪ್ಪು ನೀತಿಗಳ ವಿರುದ್ಧ ಎಡ ಪಕ್ಷಗಳು ಬದಲಿ ನೀತಿಯನ್ನು ರೂಪಿಸಿವೆ. ಹಲವು ವಿರೋಧೀ ಶಕ್ತಿಗಳು ಈ ಬಗ್ಗೆ ಎಡ ಪಕ್ಷಗಳ ನಿಲುವನ್ನು ಪೂರ್ಣವಾಗಿ ಒಪ್ಪಿಕೊಳ್ಳದಿದ್ದರೂ, ಕೆಲವು ತತ್‌ಕ್ಷಣದ ಬೇಡಿಕೆಗಳ ಬಗ್ಗೆ ಒಮ್ಮತ, ಐಕ್ಯ ಕಾರ್ಯಾಚರಣೆ ಸಾಧ್ಯವಾಗಿದೆ. ಇದು 1984 ಜನವರಿಯ ಕಲ್ಕತ್ತ ಸಮಾವೇಶದಲ್ಲಿ ವ್ಯಕ್ತವಾಗಿತ್ತು.

ಈ ಮೇಲಿನ ವಿಶ್ಲೇಷಣೆಯಿಂದ ಬಿ.ಜೆ.ಪಿ. ಮತ್ತು ಎಡ ಪಕ್ಷಗಳು ಮೂಲಭೂತ ನೀತಿಗಳಲ್ಲಿ ಒಂದಕ್ಕೊಂದು ವಿರೋಧವಾಗಿವೆ. ಇದು ಈಗ ಪ್ರಾಧಾನ್ಯ ಪಡೆದಿರುವ ಕೋಮುವಾದಕ್ಕೆ ಮಾತ್ರ ಸೀಮಿತವಾಗಿಲ್ಲ. ಇದು ವಿದೇಶ ನೀತಿ, ಕೇಂದ್ರ ರಾಜ್ಯ ಸಂಬಂಧಗಳು, ಮತ್ತು ಸಾಮಾಜಿಕ ಆರ್ಥಿಕ ನೀತಿಗಳಿಗೂ ಸಂಬಂಧಿಸಿದೆ. ಬಿ.ಜೆ.ಪಿ. ಅಧ್ಯಕ್ಷ ಎಲ್.ಕೆ. ಅದ್ವಾನಿಯವರ"ಸೋವಿಯೆತ್‌ರಶ್ಯಾದ ಹಿಂಬಾಲಕರಾಗುವ ವಿದೇಶಿ ನೀತಿ ಮತ್ತು ಕೇಂದ್ರೀಕರಣದ ಆರ್ಥಿಕ ನೀತಿಗಳಿಗಿರುವ ಕಮ್ಯೂನಿಸ್ಟ್ ಪಕ್ಷಗಳೊಂದಿಗೆ ಯಾವುದೇ ಹೊಂದಾಣಿಕೆ ಸಾಧ್ಯವಿಲ್ಲ" ಎಂದು ಉದ್ಗರಿಸಿದ್ದಾರೆ. ಈ ಅಭಿಪ್ರಾಯದೊಂದಿಗೆ ನಮ್ಮ ಸಂಪೂರ್ಣ ಸಹಮತ ಇದೆ.

ನಾನು ಇಂಡಿಯನ್ ಎಕ್ಸ್‌ಪ್ರೆಸ್‌ನ ಸಂಪಾದಕರನ್ನು ಕೇಳ ಬಯಸುತ್ತೇನೆ. ಭ್ರಮಾಲೋಕದಲ್ಲಿ ವಿಹರಿಸುತ್ತಿರುವುದು ಯಾರು ? ಬಿ.ಜೆ.ಪಿ. ಮತ್ತು ಎಡ ಪಕ್ಷಗಳ ರಂಗದ ಕನಸು ಕಾಣುತ್ತಿರುವ ನೀವೇ ? ಅಥವಾ ಎಡ ಮತ್ತು ಜಾತ್ಯಾತೀತ ವಿರೋಧಿ ಶಕ್ತಿಗಳು ಮತ್ತು ಭಿನ್ನಮತೀಯ ಕಾಂಗ್ರೆಸ್ಸಿಗರ ನೀತಿಯುತ ಐಕ್ಯ ಕಾರ್ಯಾಚರಣೆಗೆ ಕೆಲಸ ಮಾಡುತ್ತಿರುವ ನಾವೇ ?

ಕೇರಳ ಅನುಭವ

ಈ ಸಂದರ್ಭದಲ್ಲಿ ಕೇರಳದ ಅನುಭವ ನೆನಪು ಮಾಡಿಕೊಳ್ಳುವುದು ಸೂಕ್ತ. ಮುಸ್ಲಿಂಲೀಗ್ ಮತ್ತು ಕೇರಳ ಕಾಂಗ್ರೆಸ್ ಮತ್ತಿತರರ ಬಿಟ್ಟು ಜಾತಿ ಪಕ್ಷಗಳನ್ನು ಕಾಂಗ್ರೆಸ್‌ನ್ನು ಸೋಲಿಸುವುದು ಎಡ ಪಕ್ಷಗಳ 'ಭ್ರಮೆ' ಎಂಬ ಅನೇಕ ಬಿಟ್ಟಿ ಸಲಹೆಗಳು ನಮಗೆ ಬಂದಿದ್ದವು. ಕರುಣಾಕರನ್‌ಗೆ ಭಾರೀ ಜಯ ಸಿಗುತ್ತದೆಂದು ಇಂಡಿಯನ್ ಎಕ್ಸ್‌ಪ್ರೆಸ್ ಸೇರಿದಂತೆ ಹಲವು ಪತ್ರಿಕೆಗಳು 'ಭವಿಷ್ಯ' ನುಡಿದಿದ್ದವು. ಚುನಾವಣಾ ಫಲಿತಾಂಶಗಳು ಯು.ಡಿ.ಎಫ್. ನಾಯಕರಷ್ಟೇ ಈ ಪತ್ರಕರ್ತ 'ಜ್ಯೋತಿಷಿ'ಗಳಿಗೆ ಶಾಕ್ ಕೊಟ್ಟಿತು.

ದೇಶಾದ್ಯಂತ ಈ ಅನುಭವದ ಪುನರಾವರ್ತನೆ ಸಾಧ್ಯವೇ? ಕೇರಳದಲ್ಲಿನಂತೆ ಎಡ ಪಕ್ಷಗಳು ಹಿಂದೀ ರಾಜ್ಯಗಳಲ್ಲಿ ಮತ್ತು ಆಕಾರಣ ದೇಶದಲ್ಲಿ ಪ್ರಬಲವಾದ ಶಕ್ತಿ ಅಲ್ಲ ತಾನೇ ? ಇದು ಇವರ ಮುಂದಿನ ಪ್ರಶ್ನೆಗಳು.

ಹೊಸ ಪರಿಸ್ಥಿತಿ

ಈ ಪ್ರಶ್ನೆಗಳನ್ನೆತ್ತುವವರು ಎರಡು ಅಂಶಗಳನ್ನು ಮರೆಯುತ್ತಾರೆ.

ಮೊದಲನೆಯದಾಗಿ,

ಕಾಂಗ್ರೆಸ್‌ನಲ್ಲಿ ಆಗಿರುವ ಅಲ್ಲೋಲ್ಲ ಕಲ್ಲೋಲದ ಪೂರ್ಣ ಚಿತ್ರ ಇನ್ನೂ ಸಿಗಬೇಕಾಗಿದೆಯಷ್ಟೆ. ಗುಂಪುಗಾರಿಕೆ ಬಿಟ್ಟು ನೀತಿಯ ಆಧಾರದ ಮೇಲೆ ಇನ್ನಷ್ಟು ದೊಡ್ಡ ಪ್ರಮಾಣದಲ್ಲಿ ಆಳುವ ಪಕ್ಷದಿಂದ ವಿರೋಧ ಪಕ್ಷಕ್ಕೆ ದೊಡ್ಡ ಪ್ರವಾಹ ಹರಿಯಲಿದೆ.

ಎರಡನೆಯದಾಗಿ

ಎಡ ಪಕ್ಷಗಳೂ ಸೇರಿದಂತೆ ಜಾತ್ಯಾತೀತ ವಿರೋಧ ಪಕ್ಷಗಳಲಿ ಸಾಕಷ್ಟು ದೊಡ್ಡ ಶಕ್ತಿಯಾಗಿವೆ. ಇವು ದೇಶಾದ್ಯಂತ ಒಂದು ಕಡೆ ಆಳುವ ಕಾಂಗ್ರೆಸ್ಸಿಗೆ ಮತ್ತೊಂದು ಕಡೆ ಬಿ.ಜೆ.ಪಿ. ಮತ್ತು ಇತರ ಧರ್ಮಗಳ ಅವತಾರಗಳಿಗೆ ಸಾಟಿಯಾಗಬಲ್ಲವು.

ಆದ್ದರಿಂದ ಜಾತ್ಯತೀತ ವಿರೋಧ ಪಕ್ಷಗಳು ಮತ್ತು ಭಿನ್ನ ಮತೀಯ ಕಾಂಗ್ರೆಸ್ಸಿಗರು ಧೈರ್ಯದಿಂದಎಡ ಶಕ್ತಿಗಳೊಂದಿಗೆ ನಿಲ್ಲಲು ತಯಾರಿದ್ದಾರೆಯೆ ಎಂಬುದಷ್ಟೆ ಪ್ರಶ್ನೆ. ಎಡ ಪಕ್ಷಗಳ ಮಟ್ಟಿಗೆ ಹೇಳುವುದಾದರೆ "ಕಾಂಗ್ರೆಸ್ ಆಡಳಿತದ ವಿರುದ್ಧ ಐಕ್ಯತೆ"ಯ ಹೆಸರಿನಲ್ಲಿ ಬಿ.ಜೆ.ಪಿ.ಯ ವಿರುದ್ಧ ಹೋರಾಟ ದುರ್ಬಲ ಗೊಳಿಸುವ ಪ್ರಶ್ನೆಯೂ ಇಲ್ಲ ಅಥವಾ "ಬಿ.ಜೆ.ಪಿ.ಯ ವಿರುದ್ಧ ಹೋರಾಟ"ದ ನೆವದಲ್ಲಿ ಕಾಂಗ್ರೆಸ್ ಆಡಳಿತಕ್ಕೆ ವಿರೋಧವನ್ನು ಮಂದಗೊಳಿಸುವುದೂ ಇಲ್ಲ.

ಅಚ್ಚಿನಲ್ಲಿದೆ
ಸಮಾಜವಾದ:ತತ್ವ ಮತ್ತು ಆಚರಣೆ ಲೇಖಕರು:ಇ. ಎಂ. ಎಸ್. ನಂಬೂದಿರಿಪಾದ್ ಅನುವಾದ: ಬಿ.ಮಾಧವ.

ಸೂಚನೆ

ಐಕ್ಯರಂಗದೊಡನೆ ಪತ್ರವ್ಯವಹಾರ ಮಾಡುವವರೆಲ್ಲ ಬಾತ್ಮಿದಾರರು, ಏಜಂಟರು, ಓದುಗರೆಲ್ಲ, ಸಂಪಾದಕರು ಐಕ್ಯರಂಗ ಎಂದುಬರೆಯಬೇಕು. ಹಾಗೆಯೇ ಎಂ. ಓ. ಮಾಡುವಾಗಲು ಯಾರದೆ ವ್ಯಕ್ತಿಯ ಹೆಸರು ಬರೆಯ ಬಾರದು.

ಈಗ ಪೋಸ್ಟ್ ಬೆಲೆಹೆಚ್ಚಿದೆ. ಬುಕ್ ಪೋಸ್ಟ್‌ಗೆ 50 ಪೈಸೆ ಸ್ವಂತಪ್ಯಾಕೇಜ್‌ಗೆ 60 ಪೈಸೆ ಪೋಸ್ಟ್ ಪ್ಯಾಕೇಜಿಗೆ 70 ಪೈಸೆ,ಬಾತ್ಮಿದಾರರು 50 ಪೈಸೆಯ ಹೆಚ್ಚು ಮುಚ್ಚಿದಪ್ಯಾಕೇಟುಗಳುಕಳುಹಿಸುತ್ತಾರೆ. ನಾವೂ ಇಲ್ಲಿ ಒಂದು ರೂ. ದಂಡ ತೆರಲೇ ಬೇಕಾಗುತ್ತದೆ. ಆ ರೀತಿ ಬಂದರೆ ನಾವು ಪತ್ರ, ವರದಿಗಳನ್ನು ನಿರಾಕರಿಸಬೇಕಾಗುತ್ತದೆ. ಸರಿಯಾಗಿ ಟಿಕೀಟು ಹಚ್ಚಿ ಪತ್ರ ಹಾಕಬೇಕಾಗಿ ವಿನಂತಿ.

ವ್ಯವಸ್ಥಾಪಕರು

ರೈತರಿಂದ ಉತ್ಸಾಹದ ಪಿಕೆಟಿಂಗ್

[6ನೇ ಪುಟದಿಂದ]

ಧಾರವಾಡ ಜಿಲ್ಲೆ

ಧಾರವಾಡ ನಗರದಲ್ಲಿ 112ರೈತರು ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದ್ದಾರೆ. ನೆರಹಟ್ಟಿಯಲ್ಲಿ 265 ರೈತರು ಪಿಕೆಟಿಂಗ್ ನಡೆಸಿ ಬಂಧಿತರಾಗಿದ್ದಾರೆ. ಒಂದು ಸಾವಿರಕ್ಕೂ ಮಿಕ್ಕ ರೈತರು ಬಂಧನಕ್ಕೊಳಗಾಗಿದ್ದಾರೆ.

ಹಾವೇರಿ

ಸೆಪ್ಟೆಂಬರ್ 7 ರಂದು ಹಾವೇರಿಯಲ್ಲಿ 24 ಮಹಿಳೆಯರು ಸೇರಿ ನೂರಾರು ರೈತರು ಮೆರವಣಿಗೆ ನಡೆಸಲಾಯಿತು. ತಾಲ್ಲೋಕು ಕಛೇರಿ ಪಿಕೆಟಿಂಗ್ ನಡೆಸಿದ ರೈತರಲ್ಲಿ 70 ರೈತರು ಬಂಧನಕ್ಕೊಳಗಾದರು ಕಾ॥ಎ.ಪಂಚಾಕ್ಷರಿ ಕಾ॥ರುದ್ರಪ್ಪಜ್ಯಾಬೀನರೈತರನ್ನುದ್ದೇಶಿಸಿ ನಂತರ ನಡೆದ ಸಭೆಯಲ್ಲಿ ಮಾತನಾಡಿದರು.

ಹಾನಗಲ್ಲು

ತಾಲ್ಲೋಕಿನ ನೂರಾರು ರೈತಕೃಷಿ ಕೂಲಿಗಾರರು ಸೆಪ್ಟೆಂಬರ್ 11 ರಂದು ಪ್ರಮುಖ ಬೀದಿಯಲ್ಲಿ ಮೆರವಣಿಗೆ ನಡೆಸಿ ತಾಲ್ಲೋಕು ಕಛೇರಿಯನ್ನು ಪಿಕೆಟಿಂಗ್ ಮಾಡಿ ಕಛೇರಿಯ ಕಾರ್ಯ ಸ್ಥಗಿತಗೊಳಿಸಿದ್ದರು. ಬೀದಿಗಳಲ್ಲಿಸುತ್ತಿನಿಂತ ಸಾವಿರ ಜನರು ರ್‍ಯಾಲಿ ವೀಕ್ಷಿಸಿದರು. ವಕೀಲರು ಕೋರ್ಟುಗಳನ್ನು ತೊರೆದು ಬಂದು ವೀಕ್ಷಿಸಿದರು. 23 ಮಹಿಳೆಯರು ಸೇರಿದಂತೆ 243 ಮಂದಿ ರೈತರನ್ನು ಬಂಧಿಸಲಾಯಿತು. ನಂತರ ನಡೆದ ಬಹಿರಂಗ ಸಭೆಯಲ್ಲಿ ಕಾ.ಪಕ್ಕೀರಪ್ಪ, ಧಾರೇಶ್ವರ, ವಿ.ಪಂಚಾಕ್ಷರಿ ಭಾಷಣ ಮಾಡಿದರು.

ಸತ್ತೂರ

ರೈತ ಕೃಷಿಕೂಲಿಗಾರ ತಾಲ್ಲೋಕು ಕಾರ್ಯಕರ್ತರು ಸೆಪ್ಟೆಂಬರ್11ರಂದು ಧಾರವಾಡದ ಜಿಲ್ಲಾಧಿಕಾರಿಯವರಕಛೇರಿಗೆ ಮೆರವಣಿಗೆಯಲ್ಲಿ ತೆರಳಿ 50 ಮಂದಿ ಮಹಿಳೆಯರೂ ಸೇರಿದಂತೆ 200 ಜನ ಪಿಕೆಟಿಂಗ್‌ನಡೆಸಿಬಂಧನಕ್ಕೊಳಗಾದರು ಕಾರ್ಮಿಕರು ವಿದ್ಯಾರ್ಥಿ ಯುವಜನರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ರೈತ ಸಂಘದ ಅಧ್ಯಕ್ಷ ಕಾ. ಮಹದೇವಪ್ಪ ಕಾರ್ಯದರ್ಶಿ ಕಾ.ಚನ್ನಬಸಣ್ಣ ಕರಡೆಣ್ಣ ನೇತೃತ್ವ ವಹಿಸಿದ್ದರು.

ಉತ್ತರ ಕನ್ನಡ ಜಿಲ್ಲೆ

ಜೋಯಿಡಾ ತಾಲ್ಲೋಕಿನ ರೈತರು ಸೆಪ್ಟೆಂಬರ್ 10ರಂದು ತಹಸೀಲ್ದಾರ್ ಕಛೇರಿ ಪಿಕೆಟಿಂಗ್ ಮಾಡಿ ಆಫೀಸಿನೊಳಕ್ಕೆ ನುಗ್ಗಲು ಪ್ರಯತ್ನಿಸಿದಾಗ 80 ರೈತರನ್ನು ಬಂಧಿಸಲಾಯಿತು. ಕಾ॥ ಟಿ.ಎಸ್. ನಾಯಕ್, ಹರೀಶ್ ನಾಯಕ್, ಬಸವಣ್ಣ ಬಾಳೇಶಗೋಳ, ದತ್ತು ವರ್ತಟಕರ, ಸುಬ್ರಾಯ ಮುಂತಾದ ನಾಯಕರು ನಾಯಕತ್ವ ವಹಿಸಿದ್ದರು. ಎಂದು ಕಾ. ಅಕ್ರಮಖಾನ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಿರಸಿ

ಅಸಿಸ್ಟೆಂಟ್ ಕಮೀಶನರ್ ಕಛೇರಿ ಮುಂದೆ ಸೆಪ್ಟೆಂಬರ್ 11ರಂದು ಪಿಕೆಟಿಂಗ್ ನಡೆಸಿದ 36 ರೈತರನ್ನು ಬಂಧಿಸಲಾಯಿತು. ಕಾಂ. ಬಂಗಾರೇಶ್ವರ, ಪಿ.ಜಿ. ಮಶಾಲ್ದಿ, ಶಾಂತರಾಂ ನಾಯಕ್ ರೈತರನ್ನುದ್ದೇಶಿ ಮಾತನಾಡಿದರು.

ಬೆಳಗಾಂ ಜಿಲ್ಲೆ

ಜಿಲ್ಲೆಯ ಸೌದತ್ತಿ ಘಟಕ ರಾಜ್ಯದಲ್ಲಿಯೇ ವಿನೂತನವಾದ ಚರಿತ್ರೆ ನಿರ್ಮಿಸಿದೆ. ಸೆಪ್ಟೆಂಬರ್ 7ರಂದು ಪಿಕೆಟಿಂಗ್ ನಡೆಸಿದ 265ರೈತರು ಜಾಮೀನಿನಮೇಲೆ ಬಿಡುಗಡೆಯಾಗಲು ನಿರಾಕರಿಸಿದರು. ಸೆಪ್ಟೆಂಬರ್ 21 ರವರೆಗಿನ ಈ ರೈತರನ್ನು ಬೆಳಗಾಂನ ಇಂಡಲಗ ಜೈಲಿನಲ್ಲಿಡಲಾಗಿದೆ. ಸೆಪ್ಟೆಂಬರ್ 8 ರಿಂದ 11 ರವರೆವಿಗೂ ಒಟ್ಟು1ಸಾವಿರ ರೈತರು ಪಿಕೆಟಿಂಗ್ ನಡೆಸಿಬಂಧನಕ್ಕೊಳಗಾಗಿದ್ದಾರೆ. ಪ್ರತಿ ನಿತ್ಯ 200 ಮಂದಿ ರೈತರನ್ನು ಚಳುವಳಿಗೆ ಇಳಿಸುವ ನಿರ್ಧಾರ ಕೈಗೊಂಡಿದ್ದ ಸೌದತ್ತಿ ತಾಲ್ಲೋಕು ರೈತ ಸಂಘ ಯಶಸ್ವಿಯಾಗಿ ಜಾರಿಗೊಳಿಸಿ ದಾಖಲೆ ನಿರ್ಮಿಸಿದೆ. ಸೆಪ್ಟೆಂಬರ್ 7ರಂದು ಕಾ. ಶಂಭುಲಿಂಗ ಸೊನ್ನದ ಮತ್ತು ಎಲ್.ಎಸ್.ನಾಯಕ್ ನೇತೃತ್ವ ವಹಿಸಿದ್ದರು.

ವರದಿ : ರಾಜಣ್ಣ

(ವಿವಿಧ ಜಿಲ್ಲೆ ವರದಿ ಮುಂದಿನವಾರ)

ಸೆಂಟ್ರೆಲ್ ಜೈಲಿಗೆ ಅಟ್ಟಲ್ಪಟ್ಟ ರೈತರು

ಸೆಪ್ಟೆಂಬರ್ 7ರಿಂದ14ರವರೆವಿಗೂ ರಾಜ್ಯಾದ್ಯಂತ ಸಾವಿರಾರು ರೈತರು, ಕೃಷಿ ಕಾರ್ಮಿಕರುಶಾಂತರೀತಿಯಿಂದ ಮತ ಪ್ರದರ್ಶನ, ಪಿಕೆಟಿಂಗ್ ನಡೆಸುವ ಸಂದರ್ಭದಲ್ಲಿ ಬೆಳಗಾಂಜಿಲ್ಲೆಯ ಸೌದತ್ತಿ ಮತ್ತು ಬಿಜಾಪುರ ಪೋಲಿಸರು ರೈತರನ್ನು ಬಂಧಿಸಿ ಜೈಲಿಗೆ ಹಾಕಿ ಖಟ್ಲೆ ದಾಖಲು ಮಾಡಿದ್ದಾರೆ ಸೌದತ್ತಿಯ 249 ರೈತರನ್ನುಬಂಧಿಸಿ ಹಿಂಡಲಗಾ ಜೈಲಿನಲ್ಲಿ(ಬೆಳಗಾಂ) ರಿಮಾಂಡ ಮಾಡಲಾಗಿದೆ. ಬಿಜಾಪುರದಲ್ಲಿ 12 ಮಹಿಳೆಯರನ್ನೊಳಗೊಂಡು 38 ಜನರನ್ನು ಜೈಲಿನಲ್ಲಿಡಲಾಗಿದೆ. ಮರು ದಿವಸ ಕೋರ್ಟಿಗೆ ತರುವಾಗ ಕೈಗೆ ಬೇಡಿತೊಡಿಸುವ ಪ್ರಯತ್ನ ನಡೆಯಿತು. ಶಾಂತ ರೀತಿಯಿಂದ ಪಿಕೆಟಿಂಗ್ ನಡೆಸುತ್ತಿದ್ದ ರೈತರನ್ನು ಪೋಲೀಸರು ಬಂಧಿಸಿ, ಖಟ್ಲೆಹಾಕಿ ಅನ್ನ,ನೀರು ಕೊಡದೆ ಉಪವಾಸ ಇರುವಂತೆ ಮಾಡಿದ ಪೋಲಿಸರ ವರ್ತನೆಯನ್ನು ಭಾರತ ಕಮ್ಯೂನಿಸ್ಟ್‌ಪಕ್ಷ(ಮಾರ್ಕ್ಸ್‌ವಾದಿ) ಬಲವಾಗಿ ಖಂಡಿಸುತ್ತದೆ. ರೈತರ ಮೇಲೆ ಪೋಲೀಸರು ಹಾಕಿರುವ ಖಟ್ಲೆ ಕೂಡಲೇ ತೆಗೆದು ಹಾಕಿ ರೈತರನ್ನೆಲ್ಲಾ ಬಿಡುಗಡೆ ಮಾಡವಂತೆ ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾದ ಕಾ. ಎನ್. ಕೆ. ಉಪಾಧ್ಯಾಯರು ಒತ್ತಾಯಿಸಿದ್ದಾರೆ.

Printed & Published by P. Ramachandra Rao on behalf of the Communist Party of India [Marxist] Karnataka State Committee K. V. Temple Street, Sultanpet, Bangalore-560053 Editorial and Managerial Office : L-56, K. V. Temple Street, Sultanpet B-53 Phone : 75331 Editor P. Ramachandra Rao Managing Editor : N. K. Upadhyaya